ಸಂಪಾದಕರು :
ಎಂ.ಎಸ್. ವಿಕಾಸ್

ಭಾನುವಾರ, ಮಾರ್ಚ್ 24, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 313 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023
janathavani@mac.com
www.janathavani.com
08192 254736 91642 99999

DAVAN
K-CET&NEET
- 22 days crash course
- Cumulative Tests
- 2 Grand Tests
- 10 year experience faculties

Whatcanwelearn?
Mathematics Physics Biology Chemistry

ದವನ್ - ನೂತನ
PUC SCIENCE
CRASH COURSE
Davan College | Nutana College
PUC Science - CET | NEET | JEE

Seats . Limited Seat Limited

Fees
Rs 5500/-
ಕೊನೆಯ ದಿನಾಂಕ
26 ಮಾರ್ಚ್

8970 225551
DAVANGERE






ದಾವಣಗೆರೆ: ಮೈಯೆಲ್ಲ ಮಣ್ಣಾಗಿಸಿಕೊಂಡು, ಗೆಲ್ಲುವ ಗುರಿ ಇಟ್ಟುಕೊಂಡು ಬಂದ ಪೈಲ್ವಾನರು, ತೊಡೆ ತಟ್ಟಿ ಇಡೀ ಮೈದಾನವನ್ನೇ ಝಲ್ ಎನ್ನಿಸಿದ ಜಗಜಟ್ಟಿಗಳು, ಕುಸ್ತಿಯಲ್ಲಿ ಚಿತ್ ಬೀಳಿಸಿದವರ ಪರ ಕೇಕೆ ಹಾಕಿದ ಜನಸ್ತೋಮ...!

ಇಲ್ಲಿನ ಬೀರಲಿಂಗೇಶ್ವರ ಮೈದಾನದಲ್ಲಿ ದುರ್ಗಾಂಬಿಕಾ ಜಾತ್ರೆ ಅಂಗವಾಗಿ ಮೂರು ದಿನಗಳ ಕಾಲ ಹಮ್ಮಿಕೊಳ್ಳಲಾಗಿರುವ ಕುಸ್ತಿ ಪಂದ್ಯಾವಳಿಯ ಎರಡನೇ ದಿನವೂ ಪೈಲ್ವಾನರ ಕುಸ್ತಿ ಆಟ ನೋಡಿ ಪ್ರೇಕ್ಷಕರು ಖುಷಿಯಾದರು. ಕೇಕೆ ಹಾಕಿ ಸಂಭ್ರಮಿಸಿದರು.

ವಿವಿಧ ಡಾವ್‌ಗಳ ಮೂಲಕ ಎದುರಾಳಿಯನ್ನು ಮಣ್ಣು ಮುಕ್ಕಿಸಿದ ಪ್ರತಿಸ್ಪರ್ಧಿಯ ಆಟಕ್ಕೆ ಕುಸ್ತಿ ಪ್ರಿಯರು ಫಿದಾ ಆದರು. ಕೆಲ ಜಗಜಟ್ಟಿಗಳ ಕಾದಾಟ ಮೈನವಿರೇಳಿಸುವಂತಿತ್ತು. ನಾಳೆ ಅಂತಿಮ ದಿನವಾಗಿದ್ದು, ಖ್ಯಾತ ಪೈಲ್ವಾನರು ಕಾದಾಡಲಿದ್ದಾರೆ.

ಚಿತ್ರ: ರಫೀಕ್, ಜನತಾವಾಣಿ

# ಬರ ಪರಿಹಾರ: ಸುಪ್ರೀಂಗೆ ಮೊರೆ

## ಐದು ತಿಂಗಳ ಕಾಲ ಕಾದು ಸಾಕಾಗಿ ನ್ಯಾಯಾಲಯಕ್ಕೆ ತೆರಳಿದ್ದೇವೆ : ಸಿಎಂ

ಬೆಂಗಳೂರು, ಮಾ. 23 - ಬರ ಪರಿಹಾರ ನಿರ್ವಹಣೆಗೆ ಕೇಂದ್ರದ ಅನುದಾನ ದೊರಕಿಸುವಂತೆ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ ಮೊರೆ ಹೋಗಿದೆ.

ಕೇಂದ್ರದ ಬಿಜೆಪಿ ಸರ್ಕಾರದ ವಿರುದ್ಧ ತಿರುಗಿಬಿದ್ದಿರುವ ರಾಜ್ಯ ಸರ್ಕಾರ ಇದೀಗ ನ್ಯಾಯಾಲಯದ ಮೂಲಕ ಅನುದಾನ ಪಡೆಯಲು ಮುಂದಾಗಿದೆ.

ಗೃಹ ಕಚೇರಿ ಕೃಷ್ಣಾದಲ್ಲಿಂದು ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿದ್ದರಾಮಯ್ಯ, ರಾಜ್ಯಕ್ಕೆ ಎನ್‌ಡಿಆರ್‌ಎಫ್ ನಿಧಿಯನ್ನು ತಕ್ಷಣ ಬಿಡುಗಡೆಗೊಳಿಸಲು ಕೇಂದ್ರಕ್ಕೆ ನಿರ್ದೇಶನ ನೀಡುವಂತೆ ಸುಪ್ರೀಂ ಕೋರ್ಟ್ ಮೆಟ್ಟಿಲು ಹತ್ತಿದ್ದೇವೆ ಎಂದರು.

ಕೇಂದ್ರದಿಂದ ನಮ್ಮ ಪಾಲಿನ ಪರಿಹಾರ ಬರುತ್ತದೆ ಎಂದು ಕಾದು-ಕಾದು ಸಾಕಾಗಿ ನ್ಯಾಯಾಲಯದ ಮೊರೆ ಹೋಗಬೇಕಾಯಿತು. ಸಂವಿಧಾನದ ಪರಿಚ್ಛೇದ 32ರ ಅಡಿಯಲ್ಲಿ ನಾವು ನಮ್ಮ ಕಾನೂನು ಬದ್ಧ ಹಕ್ಕನ್ನು ಚಲಾಯಿಸಿದ್ದೇವೆ ಎಂದು ಸಮರ್ಥಿಸಿಕೊಂಡರು.

**ಕೇಂದ್ರದ ಬಿಜೆಪಿ ಸರ್ಕಾರದ ವಿರುದ್ಧ ತಿರುಗಿಬಿದ್ದಿರುವ ರಾಜ್ಯ ಸರ್ಕಾರ**

ನಮ್ಮ ಪಾಲನ್ನು ಇಂದು ಕೊಡುತ್ತಾರೆ, ನಾಳೆ ಕೊಡುತ್ತಾರೆ, ಇವತ್ತು ಬರುತ್ತೆ, ನಾಳೆ ಬರುತ್ತೆ ಎಂದು ಐದು ತಿಂಗಳಿನಿಂದ ಕಾದು, ನಮಗೆ ಬೇರೆ ದಾರಿ ಕಾಣದೆ ಸುಪ್ರೀಂ ಕೋರ್ಟ್‌ನ ಮೊರೆ ಹೋಗಿದ್ದೇವೆ ಎಂದರು.

ಬರ ಹಾಗೂ ತುರ್ತು ಸಂದರ್ಭಗಳಲ್ಲಿ ಜನರಿಗೆ ತುರ್ತಾಗಿ ಸ್ಪಂದಿಸಬೇಕು ಎನ್ನುವ ಉದ್ದೇಶದಿಂದಲೇ ವಿಪತ್ತು ನಿರ್ವಹಣಾ ಕಾನೂನು ಮಾಡಲಾಗಿದೆ. ಆದರೆ, ಇದುವರೆಗೂ ಕೇಂದ್ರ ಕಾನೂನು ಬದ್ಧವಾಗಿ ನಮಗೆ ಬರಬೇಕಾದ ಹಣದಲ್ಲಿ ಒಂದೇ ಒಂದು ಪೈಸೆಯನ್ನೂ ಕೊಟ್ಟಿಲ್ಲ ಎಂದರು.

ನಾವು ಒಕ್ಕೂಟ ವ್ಯವಸ್ಥೆಯಲ್ಲಿ ಇದ್ದೇವೆ, ರಾಜ್ಯದಲ್ಲಿ 240 ತಾಲ್ಲೂಕುಗಳ ಪೈಕಿ 223 ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿಸಿದ್ದೇವೆ. ನಾಲ್ಕು ಬಾರಿ ಮೌಲ್ಯಮಾಪನ ಮಾಡಿದ್ದೇವೆ. 48 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆ ನಷ್ಟ ಆಗಿದೆ. 3 ಬಾರಿ ಸತತವಾಗಿ ಕೇಂದ್ರಕ್ಕೆ ಮನವಿ ಪತ್ರ ಬರೆದೆವು. ಇದುವರೆಗೂ ಕೇಂದ್ರ ಸರ್ಕಾರ ರಾಜ್ಯದ ಪಾಲಿನಲ್ಲಿ ನಯಾ ಪೈಸೆಯನ್ನೂ ಕೊಟ್ಟಿಲ್ಲ ಎಂದರು.

ನಿಯಮಾವಳಿ ಪ್ರಕಾರ ರಾಜ್ಯ ಸರ್ಕಾರ ಮನವಿ ಮಾಡಿದ ವಾರದಲ್ಲಿ ಕೇಂದ್ರದ ತಂಡ ಬರಬೇಕು. ಆದರೆ, ಅಕ್ಟೋಬರ್‌ನಲ್ಲಿ ಕೇಂದ್ರ ತಂಡ ರಾಜ್ಯಕ್ಕೆ ಬಂದು ಪರಿಶೀಲನೆ ನಡೆಸಿ ಕೇಂದ್ರಕ್ಕೆ ಐಎಂಸಿಟಿ ವರದಿ ನೀಡಿದೆ.

ಈ ವರದಿ ಕೊಟ್ಟ ಒಂದು ತಿಂಗಳಲ್ಲಿ ರಾಜ್ಯಕ್ಕೆ ಬರ ಪರಿಹಾರ ಕೊಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು ಎನ್ನುವುದು ನಿಯಮ. ಆದರೆ, ಇದುವರೆಗೂ ಕೇಂದ್ರ ರಾಜ್ಯದ ಜನರಿಗೆ ಸ್ಪಂದಿಸಿಲ್ಲ ಎಂದು ಎನ್‌ಡಿಆರ್‌ಎಫ್ ನಿಯಮಾವಳಿಗಳನ್ನು ಮಾಧ್ಯಮಗಳ ಎದುರಿಗೆ ಓದಿದರು.

ಕೇಂದ್ರ ತಂಡ ವರದಿ ಕೊಟ್ಟರೂ ನಮಗೆ ಕೇಂದ್ರ ಸರ್ಕಾರ ಸ್ಪಂದಿಸದಿದ್ದಾಗ ಕಂದಾಯ ಸಚಿವ ಕೃಷ್ಣಭೈರೇಗೌಡ ಅವರು (2ನೇ ಪುಟಕ್ಕೆ)

# ಕಾಂಗ್ರೆಸ್ ಗ್ಯಾರಂಟಿಗಳನ್ನು ಕದ್ದು ರಾಜಕೀಯ : ಸಿದ್ದರಾಮಯ್ಯ

**ಅತ್ಯಂತ ಹೆಚ್ಚು ಸುಳ್ಳು ಹೇಳಿದ ಪ್ರಧಾನಿ ಮೋದಿ**



ಬೆಂಗಳೂರು, ಮಾ. 23 - ರಾಜ್ಯ ಕಾಂಗ್ರೆಸ್ ಸರ್ಕಾರ ಅನುಷ್ಠಾನಗೊಳಿಸಿರುವ ಗ್ಯಾರಂಟಿ ಯೋಜನೆಗಳನ್ನು ಕದ್ದು, ಅದಕ್ಕೆ ಮೋದಿ ಗ್ಯಾರಂಟಿ ಎಂದು ಹೆಸರಿಸಿ ರಾಜಕೀಯ ಮಾಡಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಆರೋಪಿಸಿದ್ದಾರೆ.

ಪಕ್ಷದ ಕಚೇರಿಯಲ್ಲಿಂದು ನಡೆದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ರಾಜ್ಯ, ಜಿಲ್ಲಾ, ತಾಲ್ಲೂಕು ಸಮಿತಿಗಳ ಅಧ್ಯಕ್ಷರು, ಉಪಾಧ್ಯಕ್ಷರ ಸಮಾವೇಶದಲ್ಲಿ ಮಾತನಾಡಿದ ಅವರು, ಭಾರತದ ಪ್ರಧಾನಿಗಳಲ್ಲಿ (3ನೇ ಪುಟಕ್ಕೆ)

# ಬರ ನಿರ್ವಹಣೆಯಲ್ಲಿ ರಾಜ್ಯ ಪೂರ್ಣ ವಿಫಲ : ವಿಜಯೇಂದ್ರ

**800 ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡರೂ ಎಚ್ಚೆತ್ತುಕೊಳ್ಳದ ಸರ್ಕಾರ**



ಬೆಂಗಳೂರು, ಮಾ. 23 - ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ನಿಷ್ಕ್ರಿಯವಾಗಿದೆ, ಬರಗಾಲ ನಿರ್ವಹಣೆಯಲ್ಲಿ ಸಂಪೂರ್ಣ ವಿಫಲವಾಗಿದೆ, 800ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡರೂ ಎಚ್ಚೆತ್ತುಕೊಳ್ಳದೇ ಇರುವುದು ದುರಂತ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಇಂದಿಲ್ಲಿ ಟೀಕಿಸಿದ್ದಾರೆ.

ಪಕ್ಷದ ಲೋಕಸಭಾ ಚುನಾವಣಾ ಮಾಧ್ಯಮ ಕೇಂದ್ರ ಉದ್ಘಾಟಿಸಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ನದಿಗಳಲ್ಲಿ ನೀರಿಲ್ಲ, ಕುಡಿಯುವ ನೀರಿನ ಹಾಹಾಕಾರ ಇದೆ ಎಂಬುದಾಗಿ ಮುಖ್ಯಮಂತ್ರಿ (3ನೇ ಪುಟಕ್ಕೆ)

# ರೇಣುಕಾಚಾರ್ಯರ ಮಾರ್ಗದಿಂದ ಸಮೃದ್ಧಿ

## ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿಯಲ್ಲಿ ಜಿಲ್ಲಾಧಿಕಾರಿ ಡಾ.ವೆಂಕಟೇಶ್

ದಾವಣಗೆರೆ, ಮಾ. 23- ಜಗದ್ಗುರು ರೇಣುಕಾಚಾರ್ಯರು ಆದರ್ಶವಾದಿ, ಅಹಿಂಸೆ, ಅಧ್ಯಾತ್ಮಿಕ ಚಿಂತನೆ ಹಾಗೂ ಭಕ್ತಿ, ಭಾವನೆಗಳನ್ನು ಸಮಾಜಕ್ಕೆ ನೀಡುವ ಮೂಲಕ ಮಾದರಿ ಸಮಾಜ ನಿರ್ಮಾಣದ ಬುನಾದಿ ಹಾಕಿದವರು ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದರು.

ಅವರು ಶನಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಜಿಲ್ಲಾ ಜಂಗಮ ಸಮಾಜ, ಇವರುಗಳ ಸಂಯುಕ್ತಶ್ರಯದಲ್ಲಿ ಜಿಲ್ಲಾಡಳಿತ ಭವನದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು. ವಿಶ್ವದಲ್ಲಿ ಶಾಂತಿಯನ್ನು ನೆಲೆಸಲು ಹಾಗೂ ವೀರಶೈವ ಧರ್ಮವನ್ನು ಒಂದು ಉತ್ತಮ ಹಾದಿಯಲ್ಲಿ ನಡೆಸುವುದರಲ್ಲಿ ಕಾರಣೀಭೂತರಾಗಿದ್ದಾರೆ. ಎಲ್ಲರಿಗೂ ಸಮಾನ ಚಿಂತನೆಗಳನ್ನು ನೀಡಿ ಉತ್ತಮ ಸಮಾಜವನ್ನು ನಿರ್ಮಾಣ ಮಾಡುವಲ್ಲಿ ಅವರ ಕಾಣಿಕೆ ಬಹಳ ಅತ್ಯುತ್ತಮವಾದುದು. ಇಂತಹ ಮಹಾನ್ ಪುರುಷರ ಜಯಂತಿಗಳನ್ನು ನಾವು ಸರಳವಾಗಿ ಆಚರಿಸಿದ್ದೇವೆ ಹಾಗೂ ಇವರ ಮಾರ್ಗ ಅನುಸರಿಸಿದಾಗ ನಮ್ಮ ಸಮಾಜ ಸಮೃದ್ಧಿಯಾಗಲಿದೆ ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಸೈಯ್ಯದಾ ಆಫ್ರಿನ್ ಭಾನು ಎಸ್. ಬಳ್ಳಾರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಜಿಲ್ಲಾ ಕಾರ್ಯನಿರತ ಪತ್ರಕರ್ತ ಸಂಘದ ನಿರ್ದೇಶಕರಾದ ಇಂಧುದರ್ ನಿಶಾನಿಮಠ, ರೈತ ಮುಖಂಡರಾದ ಬಲ್ಲೂರು ರವಿಕುಮಾರ್, ಜಂಗಮ ಸಮಾಜದ ಮುಖಂಡರಾದ ಸಿದ್ದಲಿಂಗ ಸ್ವಾಮಿ, ಡಿ.ಎಂ. ಜಯದೇವಪ್ಪ, ದ್ರಾಕ್ಷಾಯಣಮ್ಮ ನಿಟ್ಟುವಳ್ಳಿ ಸುವರ್ಣಮ್ಮ ಎಂಸಿಸಿ ಬ್ಲಾಕ್, ಚಂದ್ರಮ್ಮ, ವಿನುತ ರವಿ, ರೇವಣಸಿದ್ದೇಶ್ ಎಂ ಆರ್, ರುದ್ರಮುನಿ ಸ್ವಾಮಿ, ಶ್ರೀಶೈಲ ಮಠದ ವೈದಿಕ ಪಾಠಶಾಲಾ ಮಕ್ಕಳು ಉಪಸಿತರಿದ್ದರು.



# ಜೆಡಿಎಸ್‌ಗೆ ಕೋಲಾರ, ಹಾಸನ, ಮಂಡ್ಯ ಕ್ಷೇತ್ರಗಳು

**ಬಿಜೆಪಿ ಜೊತೆ ಸೀಟು ಹಂಚಿಕೆ ಅಂತಿಮ**

ಬೆಂಗಳೂರು, ಮಾ. 23 - ಜೆಡಿಎಸ್-ಬಿಜೆಪಿ ನಡುವಿನ ಸೀಟು ಹಂಚಿಕೆ ಪ್ರಕ್ರಿಯೆ ಅಂತಿಮವಾಗಿದ್ದು, ವಿವಾದಿತ ಕೋಲಾರ ಲೋಕಸಭಾ ಕ್ಷೇತ್ರ ಸೇರಿದಂತೆ, ಹಾಸನ ಮತ್ತು ಮಂಡ್ಯ ಕ್ಷೇತ್ರಗಳು ಜೆಡಿಎಸ್ ಪಾಲಾಗಿವೆ. ಉಳಿದ 25 ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಕಣಕ್ಕಿಳಿಯಲಿದ್ದಾರೆ.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ದೆಹಲಿಯಲ್ಲಿದ್ದು ಬಿಜೆಪಿ ವರಿಷ್ಠರೊಂದಿಗೆ ಸಮಾಲೋಚನೆ ನಡೆಸಿದ ನಂತರ ಸೀಟು ಹಂಚಿಕೆ ಪೂರ್ಣಗೊಂಡಿತು.

ಕುಮಾರಸ್ವಾಮಿ ಅವರು, ಹೃದಯ ಶಸ್ತ್ರ ಚಿಕಿತ್ಸೆಗೆ ಒಳಗಾಗಿರುವುದರಿಂದ ದೇವೇಗೌಡರೇ ಸೀಟು ಹಂಚಿಕೆ ಹಾಗೂ ಅಭ್ಯರ್ಥಿಗಳ ಆಯ್ಕೆ ಕುರಿತಂತೆ ಉಭಯ ನಾಯಕರ ಮಾತುಕತೆ ನಡೆಸಿದರು.

ಈಗಾಗಲೇ 20 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿರುವ ಬಿಜೆಪಿ, ಇನ್ನು ತನ್ನ ಪಾಲಿನ ಐದು ಕ್ಷೇತ್ರಗಳ ಅಭ್ಯರ್ಥಿಗಳ ಹೆಸರುಗಳನ್ನು ಯಾವುದೇ ಕ್ಷಣದಲ್ಲಿ ಪ್ರಕಟಿಸಲಿದೆ.

ದೆಹಲಿಯಲ್ಲಿ ಮಾತುಕತೆ ಮುಗಿಯುತ್ತಿದ್ದಂತೆ ಬಿಜೆಪಿ (3ನೇ ಪುಟಕ್ಕೆ)

# ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿ ಇಂದು ನಡೆಯಬೇಕಿದ್ದ ಹೋಳಿ ಹಬ್ಬ ನಾಳೆಗೆ

ದಾವಣಗೆರೆ, ಮಾ.23- ನಗರದ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿ ನಾಳೆ ದಿನಾಂಕ 24ರ ಭಾನುವಾರ ಹಮ್ಮಿಕೊಂಡಿದ್ದ ಹೋಳಿ ಹಬ್ಬವನ್ನು ನಾಡಿದ್ದು ದಿನಾಂಕ 25ರ ಸೋಮವಾರ ಆಚರಿಸಲಾಗುವುದು ಎಂದು ಸಾರ್ವಜನಿಕ ಹಿಂದೂ ಮಹಾಗಣಪತಿ ಟ್ರಸ್ಟ್ ಅಧ್ಯಕ್ಷ ಜೊಳ್ಳಿ ಗುರು ತಿಳಿಸಿದ್ದಾರೆ.

ಹಿಂದೂ ಪದ್ಧತಿಯಂತೆ ಮತ್ತು ಸಾರ್ವಜನಿಕರ ಒತ್ತಾಯದ ಹಿನ್ನೆಲೆಯಲ್ಲಿ ಈ ಬದಲಾವಣೆ ಮಾಡಲು ತೀರ್ಮಾನಿಸಲಾಗಿದೆ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ಹೇಳಿದ್ದಾರೆ. ನಾಡಿದ್ದು ಸೋಮವಾರ ಏರ್ಪಡಿಸಿರುವ ಓಕುಳಿ ಆಚರಣೆಯಲ್ಲಿ ಸಾರ್ವಜನಿಕರು ಭಾಗವಹಿಸುವುದರ ಮೂಲಕ ಯಶಸ್ವಿಗೊಳಿಸುವಂತೆ ಜೊಳ್ಳಿ ಗುರು ಮನವಿ ಮಾಡಿದ್ದಾರೆ.

# ನಾಳೆಯಿಂದ ಮೌಲ್ಯಾಂಕನ ಪರೀಕ್ಷೆ

**ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಅಡ್ಡಿಯಾಗದಂತೆ ವೇಳಾ ಪಟ್ಟಿ ಸಿದ್ಧ**

ಬೆಂಗಳೂರು, ಮಾ. 23 - ರಾಜ್ಯ ಪಠ್ಯಕ್ರಮ ಬೋಧಿಸುವ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳ 5, 8 ಮತ್ತು 9ನೇ ತರಗತಿಯ ವಿದ್ಯಾರ್ಥಿಗಳಿಗೆ ನಾಡಿದ್ದು, ಸೋಮವಾರದಿಂದ ಮೌಲ್ಯಾಂಕನ ಪರೀಕ್ಷೆಗಳನ್ನು ನಡೆಸಲು ಶಿಕ್ಷಣ ಇಲಾಖೆ ವೇಳಾ ಪಟ್ಟಿ ಪ್ರಕಟಿಸಿದೆ.

ಕರ್ನಾಟಕ ಹೈಕೋರ್ಟ್‌ನ ವಿಭಾಗೀಯ ಪೀಠ ಪರೀಕ್ಷಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಅನುಮತಿ ನೀಡುತ್ತಿದ್ದಂತೆ, ರಾಜ್ಯ ಸರ್ಕಾರ ಸಿದ್ಧತೆಗಳನ್ನು ಮಾಡಿಕೊಂಡಿದೆ.

ಸೋಮವಾರದಿಂದ ರಾಜ್ಯಾದ್ಯಂತ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳು ಆರಂಭವಾಗಲಿದ್ದು, ಇದರೊಂದಿಗೆ 5, 8 ಮತ್ತು 9ನೇ ತರಗತಿಗಳ ಬೋರ್ಡ್ ಪರೀಕ್ಷೆಗೆ ಅಡ್ಡಿಯಾಗದಂತೆ ವೇಳಾಪಟ್ಟಿಯನ್ನು ಸಿದ್ಧಪಡಿಸಲಾಗಿದೆ.

ಐದನೇ ತರಗತಿಯ ಎರಡು ವಿಷಯಗಳಿಗೆ ಪರೀಕ್ಷೆ ಬಾಕಿ ಇದ್ದು, ಮಾರ್ಚ್ 25ರ ಸೋಮವಾರ ಮಧ್ಯಾಹ್ನ 2.30ರಿಂದ 4.30 ರವರೆಗೆ ಪರಿಸರ ಅಧ್ಯಯನ ವಿಷಯ ಪರೀಕ್ಷೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಐದನೇ ತರಗತಿಯ ಗಣಿತ (ದ್ವಿಭಾಷೆ) ಪರೀಕ್ಷೆಯು ಮಾರ್ಚ್ 26ರ ಮಂಗಳವಾರ ಬೆಳಗ್ಗೆ 10 ರಿಂದ 12 ರವರೆಗೆ ನಡೆಯಲಿದೆ. ಎಂಟನೇ ತರಗತಿಯ ನಾಲ್ಕು ವಿಷಯಗಳ ಮೌಲ್ಯಾಂಕನ ಪರೀಕ್ಷೆ ಬಾಕಿ ಇದ್ದು, ಮಾರ್ಚ್ 25ರ ಸೋಮವಾರ ತೃತೀಯ ಭಾಷೆ ಪರೀಕ್ಷೆ ಮಧ್ಯಾಹ್ನ 2.30 ರಿಂದ 5 ಗಂಟೆಯವರೆಗೆ, ಮಾರ್ಚ್ 26ರ ಮಂಗಳವಾರ ಗಣಿತ ವಿಷಯ ಪರೀಕ್ಷೆಯು ಬೆಳಗ್ಗೆ 10 ರಿಂದ 12.30ರವರೆಗೆ ನಡೆಯಲಿದೆ.

ವಿಜ್ಞಾನ ವಿಷಯದ ಪರೀಕ್ಷೆ ಮಾರ್ಚ್ 27ರ ಬುಧವಾರ ಮಧ್ಯಾಹ್ನ 2.30ರಿಂದ 5 ಗಂಟೆಯವರೆಗೆ, ಮಾರ್ಚ್ 28ರ ಗುರುವಾರದಂದು ಸಮಾಜ ವಿಜ್ಞಾನ ವಿಷಯದ ಪರೀಕ್ಷೆ ಬೆಳಗ್ಗೆ 10 ರಿಂದ 12.30ರವರೆಗೆ ನಡೆಯಲಿದೆ.

ಇನ್ನು ಒಂಭತ್ತನೇ ತರಗತಿಗಳ ನಾಲ್ಕು ವಿಷಯಗಳ ಮೌಲ್ಯಾಂಕನ ಪರೀಕ್ಷೆ ಮಾರ್ಚ್ 25 ರಿಂದ 28 ರವರೆಗೆ ನಡೆಯಲಿವೆ.

ಮಾರ್ಚ್ 25ರ ಸೋಮವಾರದಂದು ತೃತೀಯ ಭಾಷೆ ಪರೀಕ್ಷೆ ಮಧ್ಯಾಹ್ನ 2ರಿಂದ 5 ಗಂಟೆವರೆಗೆ ಹಾಗೂ ಎನ್‌ಎಸ್‌ಕ್ಯೂಎಫ್ ಪರೀಕ್ಷೆಯು ಅಂದೇ ಮಧ್ಯಾಹ್ನ 2 ರಿಂದ 4.15 ರವರೆಗೆ ನಡೆಯಲಿದೆ. ಗಣಿತ ವಿಷಯ ಪರೀಕ್ಷೆ ಮಾರ್ಚ್ 26ರ ಮಂಗಳವಾರದಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1.15 ರವರೆಗೆ, ಮಾರ್ಚ್ 27ರ ಬುಧವಾರದಂದು ವಿಜ್ಞಾನ ವಿಷಯ (5ನೇ ಪುಟಕ್ಕೆ)

# ಕೆಟ್ಟು ನಿಂತ ರೈಲನ್ನು ತಳ್ಳಿದ ಅಧಿಕಾರಿಗಳು



ಅಮೇಥಿ, ಮಾ. 23 – ರೈಲ್ವೆ ಅಧಿಕಾರಿಗಳಿದ್ದ ತಪಾಸಣಾ ರೈಲೊಂದು ಕೆಟ್ಟು ನಿಂತ ಕಾರಣ, ರೈಲ್ವೆ ಸಿಬ್ಬಂದಿ ತಳ್ಳುವ ಮೂಲಕ ತಮ್ಮ ಶಕ್ತಿ ಬಳಸಿ ಅದನ್ನು ಬೇರೆ ಹಳಿಗೆ ರವಾನಿಸಿದ ವಿಡಿಯೋ ವೈರಲ್ ಆಗಿದೆ.

ಶುಕ್ರವಾರದಂದು ಅಧಿಕಾರಿಗಳು ಸುಲ್ತಾನ್‌ಪುರದಿಂದ ನಿಹಾಲ್‌ಘರ್‌ವರೆಗೆ ಪರಿಶೀಲನಾ ಕಾರ್ಯ ನಡೆಸುತ್ತಿದ್ದರು. ಆಗ ನಿಹಾಲ್‌ಘರ್ ರೈಲ್ವೆ ನಿಲ್ದಾಣದ ಬಳಿ ಇಂಜಿನ್‌ನಲ್ಲಿ ಸಮಸ್ಯೆ ಕಾಣಿಸಿಕೊಂಡಿತು.

ನಿಹಾಲ್‌ಘರ್ ರೈಲ್ವೆ ನಿಲ್ದಾಣದ ಮುಂದಿನ ಕ್ರಾಸಿಂಗ್‌ನಲ್ಲಿ ಮತ್ತೊಂದು ರೈಲು ಬರಬೇಕಿತ್ತು. ತಪಾಸಣಾ ರೈಲನ್ನು ದುರಸ್ತಿ ಮಾಡಲು (2ನೇ ಪುಟಕ್ಕೆ)

# ರಾಷ್ಟ್ರಪತಿ ವಿರುದ್ಧ ಸುಪ್ರೀಂನಲ್ಲಿ ಕೇಸ್ ದಾಖಲಿಸಿದ ಕೇರಳ

ನವದೆಹಲಿ, ಮಾ. 23 – ರಾಷ್ಟ್ರಪತಿ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ದಾಖಲಿಸುವ ಅಸಾಮಾನ್ಯ ಕ್ರಮಕ್ಕೆ ಕೇರಳ ಸರ್ಕಾರ ಮುಂದಾಗಿದೆ.

ವಿಶ್ವವಿದ್ಯಾಲಯ ಕಾನೂನುಗಳ ತಿದ್ದುಪಡಿ ಸಂಬಂಧದ ಮೂರು ಮಸೂದೆಗಳು ಹಾಗೂ ಕೇರಳ ಸಹಕಾರಿ ಸೊಸೈಟಿಗಳ ತಿದ್ದುಪಡಿ ಮಸೂದೆಗಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅನುಮೋದನೆ ನೀಡುತ್ತಿಲ್ಲ ಎಂದು ಕೇರಳ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದೆ.

ಸಿಪಿಐ (ಎಂ) ನೇತೃತ್ವದ ಕೇರಳ ಸರ್ಕಾರವು ಈ ಅರ್ಜಿಯಲ್ಲಿ ಕೇಂದ್ರ ಸರ್ಕಾರ, ರಾಷ್ಟ್ರಪತಿಗಳ ಕಾರ್ಯದರ್ಶಿ, ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಹಾಗೂ ಅವರ ಹೆಚ್ಚುವರಿ ಕಾರ್ಯದರ್ಶಿಗಳನ್ನು ಎದುರಾಳಿಗಳನ್ನಾಗಿ ಮಾಡಿದೆ.

ರಾಜ್ಯಪಾಲ ಖಾನ್ ಅವರು ಏಳು ಮಸೂದೆಗಳನ್ನು ರಾಷ್ಟ್ರಪತಿ (2ನೇ ಪುಟಕ್ಕೆ)



## 'ನಮ್ಮ ಕ್ಲಿನಿಕ್' ಸದುಪಯೋಗಕ್ಕೆ ಹೊನ್ನಾಳಿ ಶಾಸಕ ಶಾಂತನಗೌಡ ಕರೆ



ಹೊನ್ನಾಳಿ, ಮಾ.23- ಬಡ ಜನತೆ ಹಾಗೂ ಕೊಳಚೆ ಪ್ರದೇಶದ ನಿವಾಸಿಗಳು ದೂರದ ಸರ್ಕಾರಿ ಆಸ್ಪತ್ರೆಗಳಿಗೆ ಹೋಗಲು ಸಾಧ್ಯವಾಗದ ಕಾರಣ ಸರ್ಕಾರ 'ನಮ್ಮಕ್ಲಿನಿಕ್' ಎಂಬ ಹೆಸರಿನಲ್ಲಿ ಚಿಕಿತ್ಸಾ ಕೇಂದ್ರ ತೆರೆಯುತ್ತಿದೆ ಎಂದು ಶಾಸಕ ಡಿ.ಜಿ. ಶಾಂತನಗೌಡ ಹೇಳಿದರು.

ಪಟ್ಟಣದ ಹಳೇ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಪ್ರಧಾನಮಂತ್ರಿ ಆರೋಗ್ಯ ಅಭಿಯಾನ ಯೋಜನೆಯಡಿ 'ನಮ್ಮ ಕ್ಲಿನಿಕ್' ಉದ್ಘಾಟಿಸಿ, ಸಾರ್ವಜನಿಕರು ಇದರ ಸದುಪಯೋಗಪಡೆದುಕೊಳ್ಳಬೇಕು ಎಂದರು. ಇದೇ ಸಂದರ್ಭದಲ್ಲಿ ಶಾಸಕರೂ ಕೂಡ ಕ್ಲಿನಿಕ್‌ನಲ್ಲಿ ತಪಾಸಣೆ ಮಾಡಿಸಿಕೊಂಡರು.

ಹೊನ್ನಾಳಿ ಆರೋಗ್ಯಾಧಿಕಾರಿ ಕೆಂಚಪ್ಪ ಮಾತನಾಡಿ, 'ನಮ್ಮ ಕ್ಲಿನಿಕ್' ಸೇವೆಯು ಆರಂಭವಾಗಿದ್ದು, ಕ್ಲಿನಿಕ್‌ನಲ್ಲಿ ಒಬ್ಬ ವೈದ್ಯರೂ ಸೇರಿದಂತೆ ನಾಲ್ವರು ಸಿಬ್ಬಂದಿಗಳು ಕಾರ್ಯ ನಿರ್ವಹಿಸಲಿದ್ದು, ಸಾರ್ವಜನಿಕರು ಸೌಲಭ್ಯ ಪಡೆಯಬಹುದಾಗಿದೆ ಎಂದರು. ಡಿಹೆಚ್‌ಓ ಷಣ್ಮುಖಪ್ಪ, ಆರ್‌ಸಿಹೆಚ್ ರೇಣುಕಾರಾಧ್ಯ, ವ್ಯವಸ್ಥಾಪಕ ಸುರೇಶ್, ಸಿಬ್ಬಂದಿಗಳಾದ ದೀಪಾ, ಸೌಮ್ಯ, ಮಮತಾ ಸೇರಿದಂತೆ ಅಧಿಕಾರಿಗಳು ಭಾಗವಹಿಸಿದ್ದರು.

# ನೊಳಂಬ ವೀರಶೈವ ಸಮಾಜವನ್ನು ಕಡೆಗಣಿಸಿದ ಬಿಜೆಪಿಗೆ ತಕ್ಕ ಶಾಸ್ತಿ



**ಸುದ್ದಿಗೋಷ್ಠಿಯಲ್ಲಿ ಹರಿಹರ ತಾಲ್ಲೂಕು ಸಮಾಜದ ಮುಖಂಡರಿಂದ ಎಚ್ಚರಿಕೆ**

**ಈಗಲೂ ಕಾಲ ಮಿಂಚಿಲ್ಲ. ತುಮಕೂರು-ಹಾವೇರಿ ಕ್ಷೇತ್ರಗಳಲ್ಲಿ ನಮ್ಮ ಸಮಾಜಕ್ಕೆ ಅವಕಾಶ ಮಾಡಿಕೊಡಲು ಒತ್ತಾಯ**

ಮಲೇಬೆನ್ನೂರು, ಮಾ. 23- ವೀರಶೈವ ಒಳಪಂಗಡಗಳಲ್ಲಿ ನೊಳಂಬ ವೀರಶೈವ ಸಮಾಜವು ಪ್ರಬಲವಾಗಿದ್ದು, ನಮ್ಮ ಸಮಾಜಕ್ಕೆ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಒಂದೂ ಸ್ಥಾನ ನೀಡದಿರುವುದನ್ನು ತೀವ್ರವಾಗಿ ಖಂಡಿಸುತ್ತೇವೆ ಎಂದು ಹರಿಹರ ತಾಲ್ಲೂಕಿನ ನೊಳಂಬ ವೀರಶೈವ ಸಮಾಜದ ಮುಖಂಡರು ಪಕ್ಷಾತೀತವಾಗಿ ಹೇಳಿದ್ದಾರೆ.

ಅವರು ಶನಿವಾರ ಪಟ್ಟಣದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖಂಡರಾದ ವಕೀಲ ನಂದಿತಾವರೆ ತಿಮ್ಮನಗೌಡ, ಜಿಗಳಿ ಇಂದೂಧರ್, ಹಳ್ಳಿಹಾಳ್ ವೀರನಗೌಡ, ಕೆ.ಎನ್. ಹಳ್ಳಿಯ ನಾಗನಗೌಡ, ಜಿ. ಬೇವಿನಹಳ್ಳಿಯ ತಿಮ್ಮನಗೌಡ ಅವರು ತುಮಕೂರು ಲೋಕಸಭಾ ಕ್ಷೇತ್ರದಲ್ಲಿ ಪ್ರತಿ ಚುನಾವಣೆಯಲ್ಲೂ ನಮ್ಮ ಸಮಾಜಕ್ಕೆ ಟಿಕೆಟ್ ನೀಡಲಾಗುತ್ತಿತ್ತು.

ಈ ಬಾರಿ ಚುನಾವಣೆಯಲ್ಲಿ ನಮ್ಮ ಸಮಾಜಕ್ಕೆ ತುಮಕೂರು ಮತ್ತು ಹಾವೇರಿ -ಗದಗ ಕ್ಷೇತ್ರಗಳಲ್ಲಿ ಅವಕಾಶ ನೀಡುವಂತೆ ಚಿಕ್ಕ ಬಾಸೂರಿನಲ್ಲಿ ಜರುಗಿದ ಶ್ರೀ ಗುರುಸಿದ್ಧರಾಮೇಶ್ವರರ ಜಯಂತ್ಯೋತ್ಸವದಲ್ಲಿ ಒಕ್ಕೊರಲಿನಿಂದ ಒತ್ತಾಯಿಸಲಾಗಿತ್ತು. ಆಗ ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಕೂಡಾ ಸಮ್ಮತಿ ಸೂಚಿಸಿದ್ದರು. ಆದರೆ ಟಿಕೆಟ್ ಹಂಚಿಕೆ ವೇಳೆ ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರು ನಮ್ಮ ಸಮಾಜವನ್ನು ನಿರ್ಲಕ್ಷ್ಯ ಮಾಡಿದ್ದಾರೆ. ನಮ್ಮ ಸಮಾಜದವರು ಮೊದಲಿನಿಂದಲೂ ಬಿಜೆಪಿಯನ್ನು ಬೆಂಬಲಿಸುತ್ತಾ ಬಂದಿದ್ದಾರೆ. ಶಿಕಾರಿಪುರದಲ್ಲಿ ಯಡಿಯೂರಪ್ಪ, ರಾಘವೇಂದ್ರ, ವಿಜಯೇಂದ್ರ ಅವರ ಗೆಲುವಿನಲ್ಲಿ ನಮ್ಮ ಸಮಾಜದ ಪಾತ್ರ ಪ್ರಮುಖವಾಗಿರುವುದನ್ನು ಅಪ್ಪ, ಮಕ್ಕಳು ಮರೆತಿದ್ದಾರೆ ಎಂದು ಮುಖಂಡರು ಎಚ್ಚರಿಸಿದರು.

ತುಮಕೂರು, ಹಾಸನ, ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ, ಚಿತ್ರದುರ್ಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ನೊಳಂಬ ವೀರಶೈವ ಸಮಾಜವು ಯಾವುದೇ ಪಕ್ಷದ ಗೆಲುವಿಗೆ ನಿರ್ಣಾಯಕವಾಗಿದ್ದು, ನಮ್ಮನ್ನು ನಿರ್ಲಕ್ಷ್ಯ ಮಾಡಿರುವ ಬಿಜೆಪಿಗೆ ಈ ಬಾರಿ ಚುನಾವಣೆಯಲ್ಲಿ ಪಾಠ ಕಲಿಸುವುದಾಗಿ ಸಮಾಜದ ಮುಖಂಡರು ಹೇಳಿದರು.

ಈಗಲೂ ಕಾಲ ಮಿಂಚಿಲ್ಲ. ತುಮಕೂರು ಕ್ಷೇತ್ರದಲ್ಲಿ ಮಾಧುಸ್ವಾಮಿ ಅವರಿಗೆ ಮತ್ತು ಹಾವೇರಿ - ಗದಗ ಕ್ಷೇತ್ರದಲ್ಲಿ ಸಂದೀಪ್ ಪಾಟೀಲ್ ಅವರಿಗೆ ಬಿಜೆಪಿ ಟಿಕೆಟ್ ನೀಡಬೇಕು. ಇಲ್ಲದಿದ್ದರೆ ತಕ್ಕ ಶಾಸ್ತಿ ಗ್ಯಾರಂಟಿ ಎಂಬ ಎಚ್ಚರಿಕೆಯ ಸಂದೇಶವನ್ನು ಯಡಿಯೂರಪ್ಪ ಅವರಿಗೆ ನೀಡಿದರು.

ಮುಖಂಡರಾದ ಮಲೇಬೆನ್ನೂರಿನ ಜಿಗಳೇರ ಹಾಲೇಶಪ್ಪ, ಬಸಾಪುರದ ಕುಬೇರಸ್ವಾಮಿ, ಗೋವಿನಹಾಳ್ ರಾಜು, ಕೆ.ಎನ್. ಹಳ್ಳಿಯ ಬಣಕಾರ ಪರಮೇಶ್ವರಪ್ಪ, ಹಳ್ಳಿಹಾಳ್‌ನ ಯರೇಹಳ್ಳಿ ಪ್ರಕಾಶ್, ಜಿ. ಬೇವಿನಹಳ್ಳಿ ಹುಲ್ಲತ್ತಿ ರುದ್ರಗೌಡ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

## ಜಿಗಳಿಯಲ್ಲಿ ಆದಿ ಜಗದ್ಗುರು ರೇಣುಕಾಚಾರ್ಯರ ಜಯಂತಿ ಆಚರಣೆ



ಮಲೇಬೆನ್ನೂರು, ಮಾ. 23- ಜಿಗಳಿ ಗ್ರಾ.ಪಂ. ಕಛೇರಿಯಲ್ಲಿ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರ ಜಯಂತಿಯನ್ನು ಶ್ರದ್ಧಾ-ಭಕ್ತಿಯಿಂದ ಆಚರಿಸಲಾಯಿತು. ಗ್ರಾಮದ ಮುಖಂಡರಾದ ಗೌಡ್ರ ಬಸವರಾಜಪ್ಪ, ಜಿ. ಆನಂದಪ್ಪ, ಬಿ.ಎಂ. ದೇವೇಂದ್ರಪ್ಪ, ಎನ್.ಆರ್. ಇಂದೂಧರ್, ಮಠದ ಕೊಟ್ರಯ್ಯ, ಬನ್ನಿಕೋಡು ನಾಗರಾಜಪ್ಪ, ಡಾ. ಎನ್. ನಾಗರಾಜ್, ನಾಗಸನಹಳ್ಳಿ ಮಹೇಶ್ವರಪ್ಪ, ಕೆ.ಎಂ. ರಾಮಪ್ಪ, ಪೂಜಾರ್ ನಾಗರಾಜ್, ಬೆಣ್ಣೇರ ನಂದ್ಯಪ್ಪ, ಮಠದ ಬಸವರಾಜಯ್ಯ, ಮುದ್ದಪ್ಪ ಶಿವಣ್ಣ, ಕಾಯಕದ ನಾಗರಾಜ್, ಹಾಲಸಿದ್ದಯ್ಯ ಶಾಸ್ತ್ರಿ, ತರನಹಳ್ಳಿ ರಾಜು, ಕಮದೋಡ ಬಸಪ್ಪ, ಪತ್ರಕರ್ತ ಪ್ರಕಾಶ್, ಪಿಡಿಓ ಉಮೇಶ್, ಕಾರ್ಯದರ್ಶಿ ಸುನೀತಾ ಬಿ. ಮೌನೇಶ್, ಮೃತ್ಯುಂಜಯ ಮತ್ತಿತರರು ಭಾಗವಹಿಸಿದ್ದರು.

## 'ಅಮೃತ ಗೋಸಲ ನಿರಂಜನ ವಂಶ ಪರಂಪರೆ' ಕೃತಿ ಲೋಕಾರ್ಪಣೆ

**ನಗರದಲ್ಲಿ ಇಂದು**

ದಾವಣಗೆರೆ, ಮಾ. 23- 'ಅಮೃತ ಗೋಸಲ ನಿರಂಜನ ವಂಶ ಪರಂಪರೆ' ಕೃತಿ ಲೋಕಾರ್ಪಣೆ ಹಾಗೂ ಗೌರವ ಡಾಕ್ಟರೇಟ್ ಪಡೆದಿರುವ ಹಿರಿಯ ವ್ಯಂಗ್ಯ ಚಿತ್ರಕಾರ ಹೆಚ್.ಬಿ. ಮಂಜುನಾಥ್ ಅವರಿಗೆ ಅಭಿನಂದನೆ, ಮಹಿಳಾ ದಿನಾಚರಣೆ, ಕಾಯಕ ಯೋಗಿ ಬಸವಶ್ರೀ, ಅಕ್ಕಮಹಾದೇವಿ ಪ್ರಶಸ್ತಿ ಹಾಗೂ ಸ್ವರಚಿತ ವಚನಗಳ ವಚನಕಾರರಿಗೆ ಸನ್ಮಾನ ಸಮಾರಂಭವನ್ನು ನಾಳೆ ದಿನಾಂಕ 24ರ ಭಾನುವಾರ ನಗರದ ರೋಟರಿ ಬಾಲಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಸಾಹಿತಿ - ನ್ಯಾಯವಾದಿ ರೇವಣ್ಣ ಬಳ್ಳಾರಿ ಅವರು, ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಮಾರಂಭದ ಸಾನ್ನಿಧ್ಯ ವಹಿಸಲಿದ್ದಾರೆ. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ ಕುಮಾರ್ ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

ಅಮೃತ ಗೋಸಲ ನಿರಂಜನಾ ವಂಶ ಪರಂಪರೆ ಕೃತಿಯು ತಮ್ಮ 27ನೇ ಕೃತಿಯಾಗಿದ್ದು, ಇದೊಂದು ಅಧ್ಯಾತ್ಮಿಕ, ಧಾರ್ಮಿಕ ಹಿನ್ನೆಲೆಯ ಹಾಗೂ ವಿರಕ್ತಮಠಗಳಿಗೆ ಸಂಬಂಧಿಸಿದ ಕೃತಿಯಾಗಿದೆ ಎಂದು ಲೇಖಕ ಎಸ್. ಮಲ್ಲಿಕಾರ್ಜುನಪ್ಪ ತಿಳಿಸಿದರು.

ಇಂದೂಧರ ನಿಶಾನಿಮಠ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ರಸ್ತೆ ಅಪಘಾತದಲ್ಲಿ ಗೃಹಿಣಿಯ ಸಾವು

ದಾವಣಗೆರೆ, ಮಾ.23- ಲಾರಿ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಪೊಲೀಸ್ ಸಿಬ್ಬಂದಿಯೊಬ್ಬರ ಪತ್ನಿ ಮೃತಪಟ್ಟಿದ್ದಾರೆ.

ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಜಯಣ್ಣ ಹೆಚ್ಚುವರಿ ಪೊಲೀಸ್ ಅಧೀಕ್ಷಕರ ಗನ್ ಮನ್ ಆಗಿ ಕೆಲಸ ಮಾಡುತ್ತಿದ್ದರು. ಅವರು ಕುಟುಂಬ ಸಹಿತ ತಮ್ಮ ಸ್ವಂತ ಊರಿಗೆ ತೆರಳುತ್ತಿದ್ದರು.

ಕಡೂರು ತಾಲ್ಲೂಕಿನ ತಂಗಲಿ ಬಳಿ ಬೈಕ್‌ನಲ್ಲಿ ಈ ಅಪಘಾತ ಸಂಭವಿಸಿದಾಗ ಜಯಣ್ಣ ಅವರ ಪತ್ನಿ ಸುಮಾ (25) ಸ್ಥಳದಲ್ಲಿಯೇ ಸಾವಿಗೀಡಾಗಿದ್ದಾರೆ. ಜಯಣ್ಣ ಅವರ ಸ್ಥಿತಿ ಗಂಭೀರವಾಗಿದ್ದು, ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿದೆ.

## ಹೋಳಿ ಹಬ್ಬ ...

ಹೋಳಿಗೆ ಮಾಡುವ ಬನ್ನಿ ಹೋಳಿಗೆ
ಹೋಳಿಗೆ ಹೋಳಿ ಹಬ್ಬಕೆ ಹೋಳಿಗೆ, ॥ ಪ ॥

ಆಹಾ ಸಿಹಿ ಸಿಹಿಯಾದ ಹೋಳಿಗೆ
ಆಹಾ ಬಾಯಲಿ ನೀರೂರಿಸೋ ಹೋಳಿಗೆ ॥ ಅಪ ॥

ತೊಗರಿ ಬೇಳೆ ಹೂರಣದ ಹೋಳಿಗೆ
ಸೊಗಸಾಗಿ ತೆಳ್ಳಗೆ ಬಳುಕೊ ಹೋಳಿಗೆ
ಜಗತ್ಪಿತನ ನೈವೇದ್ಯಕೆ ಹೋಳಿಗೆ
ಮೊಗದಲಿ ತೃಪ್ತಿ ಮೂಡಿಸೊ ಹೋಳಿಗೆ

ಹದವಾಗಿ ಬೇಳೆ ಬೆಂದಹಾಗೆಯೇ
ಹೃದಯದಿ ಭಕ್ತಿ ತುಂಬಿರಬೇಕು
ಸ್ವಾದಿಷ್ಟ ಬೆಲ್ಲವು ಸೇರಿರಬೇಕು
ಸ್ವಾದ ನಾಲಿಗೆಗೆ ಹಿತವಾಗಿರಬೇಕು

ಹೆಚ್ಚು ಸಿಹಿಯು ಆಡಂಬರದಂತೆ
ಸ್ವಚ್ಛ ಭಕ್ತಿಯು ಕಳೆದ್ಹೋಗುವುದು
ಮೆಚ್ಚುವಂತೆ ಎಲ್ಲರು ಇರಬೇಕು
ಮೆಚ್ಚಲಿ ಹರಿ ಎಂದು ಬಾಳಬೇಕು

ಕಾವು ಕೊಟ್ಟಾಗ ಮಾತ್ರ ಬೇಯುವುದು
ಕಾವು ಕಷ್ಟದಂತೆ ಗಟ್ಟಿ ಮಾಡುವುದು
ಕಾವು ಹೆಚ್ಚಾದರೆ ಸೀದು ಹೋಗುವುದು
ಕಾವು ನಿಯಂತ್ರಿಸೋ ಸಿರಿಹರಿ ಗತಿಯು

ತುಪ್ಪ ಹಾಲಿನ ಜೊತೆ ಹೋಳಿಗೆ ರುಚಿಯು
ಅಪ್ಪ ಸಿರಿಹರಿ ಧ್ಯಾನ ಭಜನೆ ಸಿಹಿಯು
ತಪ್ಪ ತಿದ್ದುವ ಬಾಲಗೋಪಾಲವಿಠಲಗೆ
ಒಪ್ಪಿಸಿದಾಗ ಬಾಳೆ ಹೋಳಿಗೆಯು

**- ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**

## ಕೇಸ್ ದಾಖಲಿಸಿದ ಕೇರಳ

**(1ನೇ ಪುಟದಿಂದ)** ಪರಾಮರ್ಶೆಗೆ ವಹಿಸಿರುವುದನ್ನು ಅಕ್ರಮ ಎಂದು ಘೋಷಿಸಬೇಕು ಎಂದೂ ಮನವಿಯಲ್ಲಿ ಕೋರಲಾಗಿದೆ. ರಾಜ್ಯಪಾಲರು ಸುದೀರ್ಘ ಕಾಲ ಮಸೂದೆಗಳನ್ನು ಬಾಕಿ ಉಳಿಸಿಕೊಂಡಿದ್ದರು. ನಂತರ ಯಾವುದೇ ಕಾರಣ ನೀಡದೇ ರಾಷ್ಟ್ರಪತಿ ಪರಾಮರ್ಶೆಗೆ ವಹಿಸಿದ್ದಾರೆ. ಇದು ಸಂವಿಧಾನದ ಉಲ್ಲಂಘನೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ

## ರೈಲನ್ನು ತಳ್ಳಿದ ಅಧಿಕಾರಿಗಳು

**(1ನೇ ಪುಟದಿಂದ)** ಸಾಧ್ಯವಾಗಲಿಲ್ಲ. ಬದಲಿ ಇಂಜಿನ್ ಸಹ ಲಭ್ಯವಿರಲಿಲ್ಲ. ಆಗ ಸಿಬ್ಬಂದಿ ರೈಲನ್ನು ಬೇರೆ ಹಳಿಗೆ ದೂಡಿದರು. ಹತ್ತಾರು ಅಧಿಕಾರಿಗಳು ಹಾಗೂ ಸಿಬ್ಬಂದಿ ರೈಲು ತಳ್ಳುವ ಮೂಲಕ ಸಂಚಾರ ಸಮಸ್ಯೆ ಬಗೆಹರಿಸಿದರು.

ಈ ವಿಡಿಯೋ ಹಂಚಿಕೊಂಡಿರುವ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್, ರೈಲ್ವೆ ಸಚಿವರನ್ನೂ ಕರೆಯಿರಿ, ಅವರೂ ರೈಲು ತಳ್ಳಲಿ ಎಂದು ಲೇವಡಿ ಮಾಡಿದ್ದಾರೆ.

ಬಿಜೆಪಿಯ ಡಬಲ್ ಇಂಜಿನ್ ಸರ್ಕಾರಕ್ಕೆ ಇಂದು ಚುನಾವಣಾ ಬಾಂಡ್ ಮೂಲಕ ಇಂಧನ ದೊರೆತಂತಿಲ್ಲ. ಹೀಗಾಗಿ ಜನರು ರೈಲನ್ನು ದೂಡುತ್ತಿದ್ದಾರೆ ಎಂದೂ ಅವರು ಹೇಳಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಕಾಂಗ್ರೆಸ್, ಬುಲೆಟ್ ರೈಲಿನ ಭರವಸೆ ನೀಡಲಾಗಿತ್ತು. ಈಗ ರೈಲನ್ನು ತಳ್ಳಲಾಗುತ್ತಿದೆ. ಮೋದಿ ಸರ್ಕಾರದಲ್ಲಿ ಪ್ರತಿಯೊಂದು ವಲಯವೂ ನಾಶವಾಗುತ್ತಿದೆ. ರೈಲ್ವೆ ಸಹ ಹೊರತಾಗಿಲ್ಲ ಎಂದಿದೆ.

## ಸೈನ್ಯ ಆಯೋಜಿಸಿದ್ದ ಏಕರೂಪ ನಾಗರಿಕ ಸಂಹಿತೆ ವಿಚಾರ ಸಂಕಿರಣ ರದ್ದು

ಶ್ರೀನಗರ, ಮಾ. 24 – ಏಕರೂಪ ನಾಗರಿಕ ಸಂಹಿತೆ ಹಾಗೂ ಇತರೆ ವಿಷಯಗಳ ಕುರಿತು ಜಮ್ಮು ಮತ್ತು ಕಾಶ್ಮೀರದಲ್ಲಿ ಸೈನ್ಯ ಆಯೋಜಿಸಿದ್ದ ವಿಚಾರ ಸಂಕಿರಣವನ್ನು ವಿರೋಧದ ನಂತರ ರದ್ದುಗೊಳಿಸಲಾಗಿದೆ. ಐ.ಪಿ.ಸಿ. ಸೆಕ್ಷನ್‌ಗಳು ಹಾಗೂ ಏಕರೂಪ ನಾಗರಿಕ ಸಂಹಿತೆ ಕುರಿತು ವಿಚಾರ ಸಂಕಿರಣ ಆಯೋಜಿಸಲಾಗಿತ್ತು. ಮಾರ್ಚ್ 26ರಂದು ಕಾಶ್ಮೀರ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಸಲು ಉದ್ದೇಶಿಸಲಾಗಿತ್ತು. ಆದರೆ, ನ್ಯಾಷನಲ್ ಕಾನ್ಫರೆನ್ಸ್ ಸೇರಿದಂತೆ ಹಲವು ಪಕ್ಷಗಳು ಈ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದವು. ಏಕರೂಪ ನಾಗರಿಕ ಸಂಹಿತೆ ರೀತಿಯ ವಿಭಜನಾತ್ಮಕ ವಿಷಯದ ಬಗ್ಗೆ ಕಾಶ್ಮೀರದಂತಹ ಸೂಕ್ಷ್ಮ ಪ್ರದೇಶದಲ್ಲಿ ವಿಚಾರ ಸಂಕಿರಣ ಆಯೋಜಿಸುವುದು ಸೂಕ್ತವಲ್ಲ. ಇಂತಹ ವಿಷಯಗಳಲ್ಲಿ ಸೈನ್ಯ ಭಾಗಿಯಾಗುವುದೂ ಸರಿಯಲ್ಲ ಎಂದು ಪಕ್ಷಗಳು ಹೇಳಿದ್ದವು.

# ಭಗತ್ ಸಿಂಗ್, ಸುಖ್‌ದೇವ್, ರಾಜ್‌ಗುರು ಹುತಾತ್ಮರ ದಿನಾಚರಣೆ

### ಎಐಡಿಎಸ್‌ಓದಿಂದ ನಗರದ ವಿವಿಧೆಡೆಯಲ್ಲಿ ಗೌರವಾರ್ಪಣೆ




ದಾವಣಗೆರೆ, ಮಾ. 23- ಎಐಡಿಎಸ್‌ಓ ವತಿಯಿಂದ ಸ್ವಾತಂತ್ರ್ಯ ಸಂಗ್ರಾಮದ ಮಹಾನ್ ಕ್ರಾಂತಿಕಾರಿಗಳು ಧೀರ ಹುತಾತ್ಮರಾದ ಭಗತ್ ಸಿಂಗ್, ಸುಖ್‌ದೇವ್ ಹಾಗೂ ರಾಜ್‌ಗುರು ಅವರ ಹುತಾತ್ಮ ದಿನಾಚರಣೆಯನ್ನು ನಗರದ ವಿವಿಧ ಕಡೆಗಳಲ್ಲಿ ಹಮ್ಮಿಕೊಳ್ಳಲಾಗಿತ್ತು.

ಬ್ರಿಟಿಷರ ದಬ್ಬಾಳಿಕೆ ವಿರುದ್ಧ ದೇಶದ ಸ್ವಾತಂತ್ರ್ಯಕ್ಕಾಗಿ ರಾಜೀ ರಹಿತವಾಗಿ ಹೋರಾಡಿ ನಗು ನಗುತ್ತಾ ಗಲ್ಲಿಗೇರಿದ ಮಹಾನ್ ಕ್ರಾಂತಿಕಾರಿಗಳಾದ ಭಗತ್ ಸಿಂಗ್, ಸುಖ್‌ದೇವ್, ರಾಜಗುರು ಅವರ ಹುತಾತ್ಮ ದಿನವನ್ನು ಎಐಡಿಎಸ್‌ಓ ಸಹಯೋಗದಲ್ಲಿ ಹೈಸ್ಕೂಲ್ ಮೈದಾನ, ಎಸ್‌ಪಿಎಸ್ ಸರ್ಕಾರಿ ಪ್ರೌಢಶಾಲೆ ಸೇರಿದಂತೆ ವಿವಿಧ ಬಡಾವಣೆಗಳಲ್ಲಿ ಆಚರಿಸಲಾಯಿತು.

ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಟಿ.ಎಸ್. ಸುಮನ್ ಮಾತನಾಡಿ, ಯಾವ ಕ್ರಾಂತಿ ಜನತೆಗೆ ಸ್ವಾತಂತ್ರ್ಯವನ್ನು ತಂದು ಕೊಟ್ಟು ಮಾನವನಿಂದ ಮಾನವನ ಶೋಷಣೆಯನ್ನು ಅಸಾಧ್ಯಗೊಳಿಸುತ್ತದೆಯೋ, ಅಂತಹ ಕ್ರಾಂತಿಯ ಸಂದೇಶವನ್ನು ವಿದ್ಯಾರ್ಥಿಗಳು ಹಾಗೂ ಯುವ ಜನರು ದೇಶದ ಮೂಲೆ ಮೂಲೆಗೂ ಒಯ್ಯಬೇಕು. ಕೋಟ್ಯಂತರ ಜನರಿಗೆ ತಲುಪಿಸಬೇಕು. ಬಂಡವಾಳ ಶಾಹಿ ಮತ್ತು ಸಾಮ್ರಾಜ್ಯವಾದ ಶೋಷಣೆಗೆ ಮುಕ್ತಾಯ ಹಾಡಲು ಸಮಾಜವಾದಿ ಕ್ರಾಂತಿ ಅನಿವಾರ್ಯ ಎಂದರು.

ಭಗತ್ ಸಿಂಗ್ ಅವರ ವಿಚಾರಧಾರೆ ಇಂದಿಗೂ ಪ್ರಸ್ತುತವಾಗಿದ್ದು ಹಸಿವು, ಬಡತನ, ನಿರುದ್ಯೋಗವಿಲ್ಲದಂತಹ ಸಮಾಜವಾದಿ ಭಾರತವನ್ನು ನಿರ್ಮಿಸುವುದೇ ಅವರ ಕನಸಾಗಿತ್ತು. ಅವರ ಕನಸನ್ನು ನನಸಾಗಿಸುವ ದಾರಿಯಲ್ಲಿ ಅವರ ಉತ್ತರಾಧಿಕಾರಿಗಳಾಗಿ ವಿದ್ಯಾರ್ಥಿಗಳು, ಯುವಜನರ ಮುನ್ನಡೆಯುವುದು ತುರ್ತು ಅಗತ್ಯ ಎಂದು ಹೇಳಿದರು.

## ಕೇಜ್ರಿವಾಲ್ ಅರ್ಜಿಯ ತುರ್ತು ವಿಚಾರಣೆ ಇಲ್ಲ

ನವದೆಹಲಿ, ಮಾ. 23 – ಜಾರಿ ನಿರ್ದೇಶನಾಲಯ ಬಂಧಿಸಿರುವುದನ್ನು ಪ್ರಶ್ನಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ದಾಖಲಿಸಿರುವ ಅರ್ಜಿಯನ್ನು ದೆಹಲಿ ಹೈಕೋರ್ಟ್ ತುರ್ತು ವಿಚಾರಣೆಗೆ ಪರಿಗಣಿಸುವ ಸಾಧ್ಯತೆ ಇಲ್ಲ ಎಂದು ಮೂಲಗಳು ತಿಳಿಸಿವೆ.

ಹೋಳಿ ಹಬ್ಬದ ಅಂಗವಾಗಿ ನ್ಯಾಯಾಲಯಕ್ಕೆ ರಜೆ ಇದೆ. ಹೀಗಾಗಿ ಮಾರ್ಚ್ 27ರ ಒಳಗೆ ವಿಚಾರಣೆ ಸಾಧ್ಯವಾಗದು ಎಂದು ನ್ಯಾಯಾಲಯದ ಮೂಲಗಳು ತಿಳಿಸಿವೆ. ಈ ವಿಷಯವನ್ನು ಭಾನುವಾರ ವಿಚಾರಣೆಗೆ ಒಳಪಡಿಸಬೇಕು ಎಂದು ಕೇಜ್ರಿವಾಲ್ ಪರ ವಕೀಲರು ಮನವಿ ಮಾಡಿಕೊಂಡಿದ್ದರು. ಅಬಕಾರಿ ನೀತಿ ಹಗರಣದಲ್ಲಿ ಸಿಲುಕಿರುವ ಕೇಜ್ರಿವಾಲ್‌ರನ್ನು ಜಾರಿ ನಿರ್ದೇಶನಾಲಯ ಬಂಧಿಸಿದೆ. ಅವರನ್ನು ವಿಶೇಷ ನ್ಯಾಯಾಲಯ ಆರು ದಿನಗಳ ಕಸ್ಟಡಿಗೆ ವಹಿಸಿದೆ.

# ಕಾಂಗ್ರೆಸ್ ಸುಸ್ಥಿರ ಕಂಪನಿ, ಬಿಜೆಪಿ ನವೋದ್ಯಮ : ರಮೇಶ್

ನವದೆಹಲಿ, ಮಾ. 23 – ಕಾಂಗ್ರೆಸ್ ಪಕ್ಷ ಸುಸ್ಥಿರವಾಗಿ ಸ್ಥಾಪಿತ ಕಂಪನಿಯಂತೆ. ಅದರ ಬಂಡವಾಳ ಮಾರುಕಟ್ಟೆ ಮೌಲ್ಯದಲ್ಲಿ ಏರಿಳಿತವಾದರೂ, ಮತ್ತೆ ಪುಟಿದೇಳಲಿದೆ ಎಂದು ಕಾಂಗ್ರೆಸ್ ಹಿರಿಯ ನಾಯಕ ಜೈರಾಮ್ ರಮೇಶ್ ಹೇಳಿದ್ದಾರೆ.

ಖಾಸಗಿ ಸುದ್ದಿ ಸಂಸ್ಥೆಯೊಂದರ ಜೊತೆ ಮಾತನಾಡಿರುವ ಅವರು, ಬಿಜೆಪಿ ಹಲವು ರಾಜ್ಯಗಳಲ್ಲಿ ಈಗಷ್ಟೇ ಕಾಲಿಡುತ್ತಿದೆ. ಬಿಜೆಪಿ ನವೋದ್ಯಮವಾಗಿದ್ದರೆ, ಕಾಂಗ್ರೆಸ್ ಸುಸ್ಥಿರವಾಗಿರುವ ಕಂಪನಿ ಎಂದು ಹೇಳಿದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ವರ್ಚಸ್ಸಿನ ಕಾರಣದಿಂದ ಬಿಜೆಪಿ ಚುನಾವಣೆಯಲ್ಲಿ ಸಾಧನೆ ಮಾಡುತ್ತಿದೆ ಎಂಬ ವಾದವನ್ನು ತಳ್ಳಿಹಾಕಿರುವ ರಮೇಶ್, ಸಂಘಟನೆಯ ಬಲವೇ ಮುಖ್ಯ ಎಂದಿದ್ದಾರೆ.

ಕಾಂಗ್ರೆಸ್ ಪಕ್ಷದಲ್ಲಿ ಸಾಕಷ್ಟು ವರ್ಷಗಳಿಂದ ಇರುವ ನಾಯಕರಿದ್ದಾರೆ. ಹೀಗಾಗಿ ಪಕ್ಷಕ್ಕೆ ಹೊಸಬರನ್ನು ಕರೆ ತರುವುದು ಕಷ್ಟ ಎಂದು ಹೇಳಿದ ರಮೇಶ್, ಹೊಸ ಪಕ್ಷಗಳಿಗೆ ಹೊಸಬರನ್ನು ಕರೆದುಕೊಳ್ಳುವುದು ಸುಲಭ ಎಂದಿದ್ದಾರೆ.

ಕಾಂಗ್ರೆಸ್‌ನಲ್ಲಿ ಟಿಕೆಟ್ ಸಿಗದವರು ಬಿಜೆಪಿಗೆ ಸೇರುತ್ತಿದ್ದಾರೆ. ಹೀಗಾಗಿ ಹಲವು ರಾಜ್ಯಗಳಲ್ಲಿ ಕಾಂಗ್ರೆಸ್‌ಗೆ ತೊಡಕಾಗಿದೆ. ಈ ಪರಿಸ್ಥಿತಿ ದಶಕಗಳಿಂದ ನಡೆದು ಬಂದಿದೆ ಎಂದವರು ಹೇಳಿದರು.

ಕಾಂಗ್ರೆಸ್ ಕೇಂದ್ರ ನಾಯಕತ್ವದಲ್ಲಿ ಬದಲಾವಣೆ ತರುವ ಕುರಿತ ಪ್ರಶ್ನೆಗೆ ಉತ್ತರಿಸಿದ ರಮೇಶ್, ಕಾಂಗ್ರೆಸ್ ಪಕ್ಷವೊಂದರಲ್ಲಿ ಮಾತ್ರ ಚುನಾಯಿತ ಅಧ್ಯಕ್ಷರಿದ್ದಾರೆ ಎಂದು ಹೇಳಿದರು.

ನಾವು ವ್ಯಕ್ತಿಗಳಿಗೆ ಅತಿಯಾದ ಪ್ರಾಮುಖ್ಯತೆ ನೀಡಬಾರದು. ಪಕ್ಷದ ಉನ್ನತ ಸ್ಥಾನದಲ್ಲಿ ಎಷ್ಟೇ ವರ್ಚಸ್ವಿ ನಾಯಕರಿದ್ದರೂ ಸಂಘಟನಾ ಬಲ ಅತ್ಯಂತ ಪ್ರಮುಖವಾಗಿದೆ. ವರ್ಚಸ್ವಿ ನಾಯಕರ ಬಗ್ಗೆ ನನಗೆ ಅತಿಯಾದ ನಂಬಿಕೆ ಇಲ್ಲ. ಬಿಜೆಪಿ ಶೇ.36ರಷ್ಟು ಮತಗಳನ್ನು ಗಳಿಸಿದೆ. ಇದರಲ್ಲಿ ಕನಿಷ್ಠ ಶೇ.22-23ರಷ್ಟು ಮತಗಳು ಸಂಘಟನೆಯ ಕಾರಣದಿಂದ ಬಂದಿವೆ. ಸಂಘಟನೆಯ ಬಲದಿಂದಾಗಿ ಶೇ.70ರಷ್ಟು ಮತಗಳು ಬರುತ್ತವೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಸ್ವಲ್ಪ ಪ್ರಮಾಣದ ಮತಗಳನ್ನು ಸೇರಿಸಿರಬಹುದು ಎಂದವರು ತಿಳಿಸಿದ್ದಾರೆ.

## ಬರ ಪರಿಹಾರ: ಸುಪ್ರೀಂಗೆ ಮೊರೆ

**(1ನೇ ಪುಟದಿಂದ)** ದೆಹಲಿಗೆ ಹೋದರೂ ಕೇಂದ್ರ ಸಚಿವರ ಭೇಟಿಗೆ ಅವಕಾಶವನ್ನೇ ಕೊಡಲಿಲ್ಲ. ಬಳಿಕ ಡಿಸೆಂಬರ್ 20 ರಂದು ನಾನು ಮತ್ತು ಕೃಷ್ಣಭೈರೇಗೌಡ ಅವರು ಮತ್ತೆ ದೆಹಲಿಗೆ ಹೋಗಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಭೇಟಿ ಮಾಡಿ ಮನವಿ ಮಾಡಿದೆವು. ಆದರೂ ನಮಗೆ ಪರಿಹಾರ ಕೊಡಲಿಲ್ಲ. ಬಳಿಕ ನಾನು ಬೆಂಗಳೂರಿನಲ್ಲೇ ಪ್ರಧಾನಿ ಮೋದಿ ಅವರನ್ನು ಖುದ್ದಾಗಿ ಭೇಟಿ ಮಾಡಿ ಮನವಿ ಮಾಡಿದೆ. ಆದರೂ ಪರಿಹಾರ ಸಿಗಲಿಲ್ಲ ಎಂದು ಹೇಳಿದರು.

ಕೇಂದ್ರದಿಂದ ನಯಾಪೈಸೆ ಬಿಡುಗಡೆ ಆಗದಿದ್ದಾಗ 450 ಕೋಟಿ ರೂ., ಕುಡಿಯುವ ನೀರಿಗೆ 870 ಕೋಟಿ ರೂ. ಬಿಡುಗಡೆ ಮಾಡಿದೆವು. ಡಿಸಿಗಳ ಬಳಿ ಇನ್ನೂ 800 ಕೋಟಿ ರೂ. ಬರ ನಿರ್ವಹಣೆ ಉದ್ದೇಶಕ್ಕಾಗಿಯೇ ಮೀಸಲಿಡಲಾಗಿದೆ. ಬರ ನಿರ್ವಹಣೆ ಕುರಿತಾಗಿ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆಗಳನ್ನು ನೀಡಲಾಗಿದೆ ಎಂದರು.

4,600 ಕೋಟಿ ರೂ. ಇನ್‌ಪುಟ್ ಸಬ್ಸಿಡಿಗೆ ಹಣ ಬೇಕು, ಕಾಯ್ದೆ ಪ್ರಕಾರ ಇಂಥಾ ಸನ್ನಿವೇಶದಲ್ಲಿ ತಡ ಮಾಡದೆ ಹಣ ಬಿಡುಗಡೆ ಆಗಬೇಕಿತ್ತು. ಆದರೆ ಐದು ತಿಂಗಳಾದರೂ ನಮಗೆ ಎನ್‌ಡಿಆರ್‌ಎಫ್ ನಿಧಿ ಬಂದೇ ಇಲ್ಲ. ಹೀಗಾಗಿ ನಾವು ಬೇರೆ ದಾರಿ ಇಲ್ಲದೆ ಸುಪ್ರೀಂಕೋರ್ಟ್ ಬಾಗಿಲು ಬಡಿಯಬೇಕಾಯಿತು.

ನಮ್ಮ ನಾಡಿಗೆ, ನಮ್ಮ ನಾಡಿನ ಜನರಿಗೆ ಆಗಿರುವ ಅನ್ಯಾಯವನ್ನು ಸರಿಮಾಡಿ ಎಂದು, ಎನ್‌ಡಿಆರ್‌ಎಫ್ ನಿಧಿ ಕೊಡಿ ಎಂದು ಮೇಲಿಂದ ಮೇಲೆ ಮನವಿ ಮಾಡಿ ಎಲ್ಲಾ ರೀತಿಯಲ್ಲೂ ಬೇಡಿಕೆ ಸಲ್ಲಿಸಿದರೂ ಪ್ರಯೋಜನ ಆಗಲಿಲ್ಲ. ಈ ಕಾರಣಕ್ಕೆ ನಾವು ಸುಪ್ರೀಂಕೋರ್ಟ್ ಬಳಿ ನ್ಯಾಯ ಕೇಳದೆ ಬೇರೆ ದಾರಿ ಇರಲಿಲ್ಲ ಎಂದರು.

ನಮಗೆ ಕಾನೂನು ಮೊರೆ ಹೋಗುವುದು ಇಷ್ಟ ಇರಲಿಲ್ಲ. ಆದರೆ ನಾವು ಕಾನೂನು ಮೊರೆ ಹೋಗುವ ಅನಿವಾರ್ಯತೆಯನ್ನು ಕೇಂದ್ರ ಸೃಷ್ಟಿಸಿದೆ ಎಂದರು.

॥ ಕೊಕ್ಕನೂರು ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ





(ದಿ॥ ಶ್ರೀ ಕೆ. ಶಾಂತರಾಜ್, ಮಾಜಿ ಪ್ರಧಾನರು ಇವರ ಧರ್ಮಪತ್ನಿ)



ಹರಿಹರ ತಾಲ್ಲೂಕು ಕೊಕ್ಕನೂರು ಗ್ರಾಮದ ವಾಸಿ

**ಶ್ರೀ ಕೆ.ಎಸ್. ಚಂದ್ರಶೇಖರ್** ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 12.03.2024ನೇ ಮಂಗಳವಾರ ರಾತ್ರಿ 8.00 ಗಂಟೆಗೆ ನನ್ನ ಮಾತೃಶ್ರೀಯವರಾದ

**ಶ್ರೀಮತಿ ಸುನಂದಮ್ಮ ಶಾಂತರಾಜ್**

ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಶಿವಗಣಾರಾಧನೆ'ಯನ್ನು**

**ದಿನಾಂಕ : 24.03.2024ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ಕೊಕ್ಕನೂರಿನಲ್ಲಿರುವ ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

**ಶ್ರೀ ಡಿ. ಸೋಮಶೇಖರ್, ಶ್ರೀ ಡಿ. ಶಿವಮೂರ್ತಿ ಹಾಗೂ ಸಹೋದರಿಯರು ಮಾವಂದಿರು, ಅಳಿಯಂದಿರು ಮತ್ತು ಮಕ್ಕಳು, ಮೊಮ್ಮಕ್ಕಳು ದಾಸರ ವಂಶಸ್ಥರು, ಕೊಕ್ಕನೂರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.**

ವಿ.ಸೂ. : ಆತ್ಮೀಯರೇ, ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


## ಹೆಚ್.ಎಂ. ಬಸಯ್ಯ ಹಳವುದರಮಠ ನಿಧನ



ದಾವಣಗೆರೆ ದೇವರಾಜು ಅರಸು ಬಡಾವಣೆ 'ಬಿ' ಬ್ಲಾಕ್ 7ನೇ ಕ್ರಾಸ್ ವಾಸಿ ಮಹಾನಗರ ಪಾಲಿಕೆ ನಿವೃತ್ತ ರೆವಿನ್ಯೂ ಇನ್ಸ್‌ಪೆಕ್ಟರ್ **ಹೆಚ್.ಎಂ. ಬಸಯ್ಯ ಹಳವುದರಮಠ** ಅವರು ದಿನಾಂಕ 23.03.2024ರ ಶನಿವಾರ ಸಂಜೆ 7.45 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 90 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 24-03-2024ರ ಭಾನುವಾರ ಮಧ್ಯಾಹ್ನ 12 ಕ್ಕೆ ನಗರದ ಬೂದಾಳ್ ರಸ್ತೆಯ ವೀರಶೈವ ರುದ್ರಭೂಮಿಯಲ್ಲಿ ನಡೆಯಲಿದೆ.

**ಇಂತಿ ದುಃಖತಪ್ತ ಕುಟುಂಬ ವರ್ಗ**
**ಶ್ರೀಮತಿ, ಶ್ರೀ ರುದ್ರಸ್ವಾಮಿ ಹೆಚ್.ಎಂ., ಶ್ರೀಮತಿ, ಶ್ರೀ ಪ್ರಭುಸ್ವಾಮಿ ಹೆಚ್.ಎಂ.**
**ಶ್ರೀಮತಿ ರೇಖಾ ಹೆಚ್.ಎಂ., ಶ್ರೀಮತಿ ಶೋಭಾ ಹೆಚ್.ಎಂ.**
**ಮತ್ತು ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು.**
**ಮೊ. : 99009 05460, 98441 77336**

## 18ನೇ ವರ್ಷದ ಪುಣ್ಯಸ್ಮರಣೆ



**ಹೆಚ್.ಎಂ.ಪ್ರಕಾಶ್‌ರವರು**

(ನೇತ್ರದಾನಿ) ಹಾಲುವರ್ತಿ ಗ್ರಾಮ.

ಜನನ: 27.10.1974 ಮರಣ: 24.03.2006

*ನೀವು ನಮ್ಮನ್ನಗಲಿ ಇಂದಿಗೆ 18 ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ*

**ತಂದೆ : ಹೆಚ್.ಡಿ.ಮಹೇಶ್ವರಪ್ಪ**
**ತಾಯಿ: ಶಿವನಾಗಮ್ಮ**
**ಸಹೋದರರು, ಅಕ್ಕಂದಿರು ಹಾಗೂ ಬಂಧು-ಬಳಗ, ಹಾಲುವರ್ತಿ ಗ್ರಾಮ, ದಾವಣಗೆರೆ ತಾಲ್ಲೂಕು.**

## ಶ್ರೀ ಕ್ಷೇತ್ರ ಆನೆಕೊಂಡದಲ್ಲಿ ನಾಳೆ ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವ

ದಾವಣಗೆರೆ, ಮಾ.23- ಶ್ರೀ ಕ್ಷೇತ್ರ ಆನೆಕೊಂಡ ಗ್ರಾಮದ ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವವು ನಾಡಿದ್ದು ದಿನಾಂಕ 25ರ ಸೋಮವಾರ ರಾತ್ರಿ 10 ಗಂಟೆಗೆ ನಡೆಯಲಿದೆ.

ನೀಲಾನಹಳ್ಳಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ಜೊತೆಗೂಡಿ ಈ ರಥೋತ್ಸವ ಏರ್ಪಾಡಾಗಿದೆ. ಸದ್ಭಕ್ತರು ಭಾಗವಹಿಸುವಂತೆ ದೇವಸ್ಥಾನದ ಕನ್ವೀನರ್ ಗೌಡ್ರ ಅಜ್ಜಪ್ಪ ತಿಳಿಸಿದ್ದಾರೆ.

## ದ್ಯಾಮಮ್ಮ ಹುಲಿಕಟ್ಟೆ ನಿಧನ



ಶ್ರೀಮತಿ ದ್ಯಾಮಮ್ಮ ಹುಲಿಕಟ್ಟೆ ಅವರು ದಿನಾಂಕ 23.03.2024ರ ಶನಿವಾರ ನಿಧನರಾದರು. ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 24.03.2024ರ ಭಾನುವಾರ ಮಧ್ಯಾಹ್ನ 12.30ಕ್ಕೆ ಮೃತರ ತೋಟದಲ್ಲಿ ನೆರವೇರಲಿದೆ.

# ಬಂಧನದ ನಂತರವೂ ಸಿಎಂ ಕೇಜ್ರಿವಾಲ್ ಕೆಟ್ಟ ರಾಜಕೀಯ : ಬಿಜೆಪಿ

ನವದೆಹಲಿ, ಮಾ. 23 – ಬಂಧನದ ನಂತರವೂ ದೆಹಲಿ ಮುಖ್ಯಮಂತ್ರಿಯಾಗಿ ಅರವಿಂದ ಕೇಜ್ರಿವಾಲ್ ಮುಂದುವರೆದಿರುವುದು ಅತ್ಯಂತ ಕೆಟ್ಟ ಸ್ವರೂಪದ ರಾಜಕೀಯ ಎಂದು ಬಿಜೆಪಿ ಟೀಕಿಸಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ಸಚಿವ ಹಾಗೂ ಬಿಜೆಪಿ ನಾಯಕ ಅನುರಾಗ್ ಠಾಕೂರ್, ಕೇಜ್ರಿವಾಲ್ ಸ್ಥಾನಕ್ಕೆ ಬರಲು ಆಮ್ ಆದ್ಮಿ ಪಾರ್ಟಿಯಲ್ಲಿ ಸ್ಪರ್ಧೆ ನಡೆದಿದೆ. ಈಗ ಕೇಜ್ರಿವಾಲ್ ಅವರ ಪತ್ನಿಯೂ ಕಣಕ್ಕೆ ಧುಮುಕಿದ್ದಾರೆ ಎಂದು ಹೇಳಿದರು. ಈ ಹಗರಣದ ಸೂತ್ರಧಾರಿ ಜೈಲಿನಲ್ಲಿರುವಂತಾಗಿದೆ. ನೈತಿಕತೆ ಹಾಗೂ ಪ್ರಾಮಾಣಿಕತೆ ಬಗ್ಗೆ ಬೋಧನೆ ಮಾಡುತ್ತಿದ್ದ ಕೇಜ್ರಿವಾಲ್, ಈಗ ಜೈಲಿನಿಂದಲೇ ಸರ್ಕಾರ ನಡೆಸುತ್ತಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು.

ಆರ್.ಜೆ.ಡಿ. ಅಧ್ಯಕ್ಷ ಲಾಲು ಪ್ರಸಾದ್ ಅಂಥವರೇ ಮೇವು ಹಗರಣದಲ್ಲಿ ಶಿಕ್ಷೆಗೆ ಗುರಿಯಾದಾಗ, ತಮ್ಮ ಪತ್ನಿಯನ್ನು ಅಧಿಕಾರಕ್ಕೆ ತಂದಿದ್ದರು ಎಂದೂ ಠಾಕೂರ್ ಹೇಳಿದರು. ಅಬಕಾರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಜ್ರಿವಾಲ್ ವಿರುದ್ಧ ಕಾಂಗ್ರೆಸ್ ನಾಯಕರು ಕಿಡಿ ಕಾರುತ್ತಿದ್ದರು. ಈಗ ಅವರನ್ನೇ ಸಮರ್ಥಿಸಿಕೊಳ್ಳುತ್ತಿದ್ದಾರೆ. ಕಾಂಗ್ರೆಸ್ ಇಷ್ಟು ಅಸಹಾಯಕ ಪರಿಸ್ಥಿತಿ ತಲುಪಿದೆ ಎಂದೂ ಠಾಕೂರ್ ಹೇಳಿದರು.

ಕಾಂಗ್ರೆಸ್ ನಾಯಕ ಅಜಯ್ ಮಾಕೆನ್ ಸೇರಿದಂತೆ ಹಲವು ನಾಯಕರು ಅಬಕಾರಿ ಹಗರಣದ ಬಗ್ಗೆ ಆರೋಪ ಮಾಡುತ್ತಿದ್ದರು. ಈಗ ಜಾರಿ ನಿರ್ದೇಶನಾಲಯ ಕ್ರಮ ತೆಗೆದುಕೊಂಡಿರುವುದಕ್ಕೆ ಅವರು ಅಭಿನಂದಿಸಬೇಕು ಎಂದರು.




**ದಿನಾಂಕ : 24.03.2024 ರಿಂದ 30.03.2024ರ ವರೆಗೆ**
**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಮಾಡಬೇಕಾಗಿರುವ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಿ ಮುಗಿಸುವಿರಿ, ಹಣಕಾಸಿನ ಸ್ಥಿತಿ-ಗತಿ ಮಧ್ಯಮ ಗತಿಯಲ್ಲಿರುವುದರಿಂದ ಹೊಸ ಯೋಜನೆ ಗಳಿಗೆ ಚಾಲನೆ ಕೊಡಲು ಹೋಗಬೇಡಿ ಸಾಮಾಜಿಕ ಗೌರವವನ್ನು ಹೆಚ್ಚಿಸಿ ಕೊಳ್ಳಲು ತಂತ್ರಗಳನ್ನು ಬಳಸುವಿರಿ, ಮಕ್ಕಳ ಭವಿಷ್ಯಕ್ಕೋಸ್ಕರ ಹೆಚ್ಚು-ವೆಚ್ಚ ಮಾಡಲು ತಯಾರಾಗುವಿರಿ, ಮಡದಿಯಾಡುವ ಮಾತಿನಲ್ಲಿ ವ್ಯತ್ಯಾಸ ಕಂಡು ಬಂದರೂ ಮನಸ್ಸಿಗೆ ಹಚ್ಚಿಕೊಳ್ಳಬೇಕಾಗಿಲ್ಲ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ದೊರೆಯಲಿದೆ. ಆಸ್ತಿ ವಿಚಾರದಲ್ಲಿ ಹೆಚ್ಚು ವಿವಾದ ಬೆಳೆಸಲು ಹೋಗಬೇಡಿ, ಈ ವಾರವೆಲ್ಲಾ ಲವಲವಿಕೆಯಿಂದಿರುವಿರಿ. ಸೋಮ-ಮಂಗಳ-ಗುರು-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಪಾಲುದಾರರೊಂದಿಗೆ ನಾಜೂಕಿನಿಂದ ಮಾತನಾಡಿ, ನಿಮಗೆ ಬರಬೇಕಾಗಿರುವ ಲಾಭಾಂಶ ಪಡೆಯುವಿರಿ. ಮಗಳು ವಿದ್ಯಾಭ್ಯಾಸಕ್ಕಿಂತ ಕಲೆಗಳ ಕಡೆ ಹೆಚ್ಚು ಗಮನ ಕೊಡುವಳು, ಯಾವುದೇ ಚರ, ಸ್ಥಿರ ಆಸ್ತಿಗಳನ್ನು ಕೊಳ್ಳುವ ಮೊದಲು ಮೂಲ ದಾಖಲೆಗಳನ್ನು ಪರಿಶೀಲಿಸಿ, ಮಕ್ಕಳು ತೋರುವ ಆಲಸ್ಯ ಅವರ ಮುಂದಿನ ಅಭ್ಯಾಸಕ್ಕೆ ತೊಂದರೆ, ಶೀತಬಾಧೆ ಹಾಗೂ ಕಣ್ಣುಬೇನೆ ಬಹಳವಾಗಿ ಕಾಡಲಿದೆ. ವಾರದ ಮಧ್ಯದಲ್ಲಿ ಆದಾಯ ದಲ್ಲಿ ಕುಸಿತ ಕಾಣಲಿದೆ. ಸಾಧು, ಸಂತರ ದರ್ಶನ ಮನಸ್ಸಿಗೆ ನೆಮ್ಮದಿ ಕೊಡಲಿದೆ, ಗೋ ಸೇವೆ ಮಾಡಿರಿ. ಭಾನು-ಸೋಮ-ಶುಕ್ರ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಆದಾಯವು ನಿಮ್ಮ ನಿರೀಕ್ಷೆ ಮೀರಿರುವುದರಿಂದ ಮುಂದಿನ ಭವಿಷ್ಯದ ದೃಷ್ಟಿಯಿಂದ ಉಳಿತಾಯ ಮಾಡುವುದು ಮೇಲು. ಆಸ್ತಿ ಪಾಲುದಾರಿಕೆ ವಿಚಾರ ಹಲವು ಮಜಲುಗಳನ್ನು ತಲುಪಲಿದೆ. ಆದ್ದರಿಂದ ತುಸು ತಾಳ್ಮೆಯಿಂದಿರುವುದು ಮೇಲು. ಮಡದಿ, ಮಕ್ಕಳೊಂದಿಗೆ ಆನಂದದಿರಬೇಕೆಂಬ ನಿಮ್ಮ ಹಂಬಲಕ್ಕೆ ಭಂಗ ಬರಲಿದೆ. ಖಾಸಗಿ ಕಂಪನಿ ನೌಕರರಿಗೆ ವೇತನ ವಿಳಂಬದಿಂದಾಗಿ ಸಾಲ ಮಾಡಬೇಕಾಗಬಹುದು. ವ್ಯತ್ಯಾಸವಾದ ಆಹಾರ ದಿಂದಾಗಿ ಉದರ ಸಂಬಂಧಿ ಆರೋಗ್ಯ ಸಮಸ್ಯೆ ಕಾಡಬಹುದು. ಆಯುಧ ಗಳನ್ನು ಎಚ್ಚರದಿಂದ ಉಪಯೋಗಿಸಿ. ಬುಧ-ಗುರು-ಶುಕ್ರ-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಯುವಕರ ನಡಾವಳಿಯಲ್ಲಿ ಕಂಡುಬರುವ ವ್ಯತ್ಯಾಸ ಹಿರಿಯರ ಚಿಂತೆಗೆ ಕಾರಣವಾಗಲಿದೆ. ಉದ್ಯಮದಲ್ಲಿ ಮಧ್ಯಮಗತಿಯ ಪ್ರಗತಿ ಕಾಣಲಿದೆ.ಕಾರ್ಮಿಕ ವರ್ಗದವರು ಶ್ರಮಕ್ಕೆ ತಕ್ಕ ಪ್ರತಿಫಲ ಕಾಣದೆ ಚಿಂತೆಗೀಡಾಗುವರು, ವಿದ್ಯಾರ್ಥಿಗಳು ಮಧ್ಯಮಗತಿ ಫಲಿತಾಂಶ ಪಡೆಯುವರು. ಹಿರಿಯರ ವ್ಯವಹಾರವನ್ನೇ ಮುಂದುವರೆಸಿಕೊಂಡು ಹೋಗಲು ನಿರ್ಧರಿಸುವಿರಿ, ಹೊಸ ಮನೆ ಕೊಳ್ಳುವ ವಿಚಾರ ಮತ್ತೆ ಮುನ್ನೆಲೆಗೆ ಬರಲಿದೆ. ಖರ್ಚು-ವೆಚ್ಚಗಳ ಮೇಲೆ ಹಿಡಿತ ಸಾಧಿಸುವುದು ಮೇಲು. ಸೋಮ-ಬುಧ-ಗುರು-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಸದಾ ದ್ವಂದ್ವಗಳಲ್ಲೇ ತೂಗಾಡುವ ನೀವು ಒಂದು ಗಟ್ಟಿ ನಿರ್ಧಾರ ತೆಗೆದುಕೊಳ್ಳುವಲ್ಲಿ ಹಿಂದೇಟು ಹಾಕುವಿರಿ, ಆರ್ಥಿಕ ಸ್ಥಿತಿ ಮಂದಗತಿಯಲ್ಲಿರುವುದರಿಂದ ಹೆಚ್ಚು ಖರೀದಿ ವಿಚಾರ ಮಾಡಬೇಡಿ. ರೈತಾಪಿ ಮಿತ್ರರಿಗೆ ಸರ್ಕಾರದಿಂದ ನೆರವು ದೊರೆಯಲಿದೆ. ಅವಿವಾಹಿತರಿಗೆ ಕಂಕಣಬಲ, ಅಪರಿಚಿತರೊಂದಿಗೆ ಹಣಕಾಸಿನ ವ್ಯವಹಾರ ಬೇಡ, ಮಕ್ಕಳೊಂದಿಗೆ ವಿನಾಕಾರಣ ವಾಗ್ವಾದವಾಗಲಿದೆ. ಶಸ್ತ್ರಚಿಕಿತ್ಸಾ ವೈದ್ಯರಿಗೆ ಹೆಚ್ಚಿನ ಬೇಡಿಕೆ ಬರಲಿದೆ. ಸರ್ಕಾರಿ ನೌಕರರಿಗೆ ಅನಪೇಕ್ಷಿತ ಸ್ಥಳಗಳಿಗೆ ವರ್ಗಾವಣೆಯಾಗಲಿದೆ. ಭಾನು-ಸೋಮ-ಬುಧ-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಕೆಲಸ ಕಾರ್ಯಗಳಲ್ಲಿ ನೀವು ತೋರುವ ಆಲಸ್ಯ ನಿಮ್ಮ ಆದಾಯಕ್ಕೆ ಮಾರಕವಾಗಲಿದೆ. ಇದನ್ನು ಗಂಭೀರವಾಗಿ ಗಮನಿಸಬೇಕಾದ ವಿಷಯ ಎಂಬುದು ನೆನಪಿರಲಿ. ನಡೆದ ಮಂಗಳ ಕಾರ್ಯಗಳ ಸವಿ ನೆನಪನ್ನು ಮತ್ತೆ ಮತ್ತೆ ಮಾಡಿಕೊಳ್ಳುವಿರಿ, ಸಾಲ ತೀರಿಸಲು ಸದಾವಕಾಶವೊಂದು ಒದಗಿ ಬರಲಿದೆ. ಬೇರೆಯರ ವಾಹನಗಳನ್ನು ಚಾಲಿಸುವಾಗ ಸಾಕಷ್ಟು ಎಚ್ಚರದಿಂದಿರಿ. ಹೂವು, ಹಣ್ಣು, ತರಕಾರಿ ಹಾಗು ಹೈನುಗಾರಿಕೆ ಈ ವಾರ ಲಾಭದಾಯಕ ವಾಗಲಿದೆ. ಹಿತಮಿತ ಭೋಜನ ಮಾಡುವುದು ಲೇಸು. ಮಂಗಳ-ಬುಧ-ಶುಕ್ರ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಪ್ರತಿಯೊಂದಕ್ಕೂ ಬೇರೆಯವರನ್ನು ಅವಲಂಬಿಸುತ್ತಾ ಹೋದಲ್ಲಿ ಮುಂದೆ ಅವರೇ ಮಾಲೀಕರಾಗಿ ನೀವೇ ನೌಕರರಾಗಬಹುದು. ಹಿರಿಯರೊಂದಿಗೆ ಉತ್ತಮ ವಿಶ್ವಾಸವನ್ನು ಹೊಂದಲು ಪ್ರಯತ್ನಿಸುವಿರಿ, ಯಾವುದಕ್ಕೋ ಮೀಸ ಲಿಟ್ಟ ಹಣ ಇನ್ನಾವುದಕ್ಕೋ ಖರ್ಚಾಗಲಿದೆ. ಆಸ್ತಿಕೊಳ್ಳುವ ವಿಚಾರ ದಲ್ಲಿ ಈ ಹಿಂದೆ ನಿಮ್ಮಲ್ಲಿದ್ದ ಆತ್ಮವಿಶ್ವಾಸದಲ್ಲಿ ಕೊರತೆ ಕಂಡುಬರಲಿದೆ. ಸರ್ಕಾರಿ ನೌಕರರು ಮೇಲಾಧಿಕಾರಿಗಳ ಮರ್ಜಿ ಹಿಡಿಯದೇ ಅನ್ಯಮಾರ್ಗವಿಲ್ಲ. ಮರೆತು ಎಲ್ಲೋ ಇಟ್ಟಿದ್ದ ಅಮೂಲ್ಯ ವಸ್ತುವೊಂದು ಮರಳಿ ಸಿಗಲಿದೆ. ಗುರು-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಹಿರಿಯರ ಆರೋಗ್ಯ ನಿಮಿತ್ತ ಸಂಪಾದಿಸಿದ ಹಣದೊಟ್ಟಿಗೆ ಕೂಡಿಟ್ಟ ಹಣವೂ ಕರಗಬಹುದು, ಹೆಂಡತಿಯ ತವರು ಮನೆಯವರು ಮಾಡಬಹುದಾದ ನೆರವನ್ನು ನಿಸ್ಸಂಕೋಚವಾಗಿ ತೆಗೆದುಕೊಳ್ಳಿ. ನಿಮಗೆ ವ್ಯಾಪಾರದಲ್ಲಿ ಮೋಸ ಮಾಡಿದವರ ವಿರುದ್ಧ ಸೇಡು ತೀರಿಸಿಕೊಳ್ಳಲು ಯತ್ನಿಸುವಿರಿ, ಈ ನಿಟ್ಟಿನಲ್ಲಿ ಯಶಸ್ವಿಯಾಗುವಿರಿ, ಕೃಷಿಕರಿಗೆ ಆದಾಯ ಹೆಚ್ಚುತ್ತಾ ಹೋಗಲಿದೆ. ಲೆಕ್ಕಪರಿಶೋಧಕರಿಗೆ ಬಿಡುವಿಲ್ಲದ ಕೆಲಸವಾಗಲಿದೆ. ವಿದೇಶದಲ್ಲಿರುವ ಮಗನು ಆಗಮಿಸಲಿದ್ದು, ಮನೆಯಲ್ಲಿ ಹಬ್ಬದ ವಾತಾವರಣ ಮೂಡಲಿದೆ. ಭಾನು-ಮಂಗಳ-ಬುಧ-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಆದಾಯ ಕಡಿಮೆ ಇದ್ದರೂ ಅದನ್ನು ಉತ್ತಮವಾಗಿ ನಿಭಾಯಿಸುವ ಕಲೆ ನಿಮಗೆ ಕರಗತವಾಗಿದೆ. ವ್ಯವಹಾರದಲ್ಲಿ ಮಗನನ್ನು ತೊಡಗಿಸಿಕೊಳ್ಳುವ ಮೊದಲು ಕೆಲಕಾಲ ಬೇರೆಯವರ ಕಡೆ ತರಬೇತಿ ಪಡೆಯುವುದು ಲೇಸು. ರಾಜಕಾರಣಿಗಳು ತಾವಾಡಲಿರುವ ಮಾತು ಮತ್ತು ಭರವಸೆಗಳ ಬಗ್ಗೆ ತುಸು ಎಚ್ಚರದಿಂದಿರಿ, ಸಂತಾನಾಪೇಕ್ಷಿಗಳ ಕನಸು ನನಸಾಗುವ ದಿನಗಳು ಶೀಘ್ರದಲ್ಲೇ ಬರಲಿದೆ, ಹಳೇ ಕಾಯಿಲೆಗಳು ಮತ್ತೆ ಮರುಕಳಿಸದಂತೆ ಎಚ್ಚರ ವಹಿಸಿ. ಭಾನು-ಮಂಗಳ-ಗುರು-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಸಿನಿಮಾ ಜೂನಿಯರ್ ಕಲಾವಿದರಿಗೆ ಬಿಡುವಿಲ್ಲದಷ್ಟು ಬೇಡಿಕೆ ಬರಲಿದೆ, ಇದರಿಂದ ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸಲಿದೆ, ನೀವು ಹಠ ಹಿಡಿದು ಕೆಲಸ ಮಾಡುವ ರೀತಿ ಎಲ್ಲರಿಗೂ ಮೆಚ್ಚುಗೆಯಾಗಲಿದೆ. ಮಡದಿ ಮಕ್ಕಳ ಇಚ್ಛೆಯಂತೆ ಅಲಂಕಾರಿಕ ವಸ್ತುಗಳ ಖರೀದಿಗೆಂದೇ ವೆಚ್ಚವಾಗಲಿದೆ. ವೃತ್ತಿಯಲ್ಲಿ ಕಿರಿಕಿರಿ ಕಂಡು ಬಂದರೂ, ಸುಲಲಿತವಾಗಿ ನಡೆಯಲಿದೆ. ಪ್ರೇಮ ಪ್ರಸಂಗಗಳು ಹಳಸಿ ತಿಪ್ಪೆ ಸೇರಲಿವೆ. ಚಿಕ್ಕಮಕ್ಕಳಿಗೆ ಶೀತಜ್ವರ ಬಾಧೆ ಬಾಧಿಸಲಿದೆ. ಆರ್ಥಿಕ ಸ್ಥಿತಿಗತಿ ಸಾಧಾರಣ. ಬುಧ-ಶುಕ್ರ-ಶನಿ-ಶುಭದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಕೊಡುಗೈ ದಾನಿಗಳಾದ ಹಿರಿಯರಿಗೆ ಸಮಾಜದಿಂದ ಹೆಚ್ಚಿನ ಗೌರವ, ಆದಾಯದಲ್ಲಿ ಏರುಗತಿ ಕಾಣುವುದರಿಂದ ಅದರ ಚಿಂತೆಬೇಡ. ಯುವಕರು ತಮ್ಮ ಚುರುಕುತನದ ಕೆಲಸಗಳಿಂದಾಗಿ ಎಲ್ಲರ ಮೆಚ್ಚುಗೆ ಪಡೆಯುವರು. ಸ್ವಂತ ಸಂಪಾದನೆಯಿಂದ ಆಸ್ತಿ ಮಾಡಲು ಪ್ರಯತ್ನಿಸಿ ಯಶಸ್ವಿಯಾಗುವಿರಿ, ಬಂಧುಗಳಿಂದ ನಿರೀಕ್ಷೆಗೂ ಮೀರಿದ ನೆರವು, ಸಂಗಾತಿ ಕೊಡುವ ಕೆಲವು ಸಲಹೆ ಗಳು ಕಾಲಾಂತರದಲ್ಲಿ ಪ್ರಯೋಜನಕ್ಕೆ ಬರಲಿವೆ. ಸಿನಿಮಾ ಕಲಾವಿದರಿಗೆ ಬೇಡಿಕೆ, ವಿಷ್ಣು ಸಹಸ್ರನಾಮ ಪಠಿಸಿರಿ. ಬುಧ-ಶುಕ್ರ-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ನೀವು ಯಾರನ್ನು ನಂಬಿದ್ದಿರೋ ಅವರೇ ಕೆಲಸ ಕಾರ್ಯಗಳಿಗೆ ಅಡ್ಡಿ ಪಡಿಸು ವರು, ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ಓದಬೇಕೆಂಬ ಹಂಬಲಕ್ಕೆ ಸಾಮಾಜಿಕ ನೆರವು, ಕೃಷಿ ಭೂಮಿ ಕೊಳ್ಳುವ ಮೊದಲು ಅದರ ಮೂಲ ದಾಖಲೆಗಳನ್ನು ಎರಡೆರಡು ಬಾರಿ ಪರಿಶೀಲಿಸಿ, ಕಣ್ಣಿನ ತೊಂದರೆ ಪದೇಪದೇ ಬಾಧಿಸಲಿದೆ. ಲೇವಾ ದೇವಿ ವ್ಯವಹಾರ ಆರ್ಥಿಕ ದೃಷ್ಟಿಯಿಂದ ಒಳ್ಳೇಯದಲ್ಲ. ಹಣಕಾಸಿನ ಹರಿವು ನಿರೀಕ್ಷೆ ಮಟ್ಟದಲ್ಲಿರುವುದರಿಂದ ದೈನಂದಿನ ಜೀವನಕ್ಕೇನೂ ತೊಂದರೆಯಿಲ್ಲ. ಕುಲದೇವತಾರಾಧನೆ ಮಾಡಿ. ಭಾನು-ಸೋಮ-ಗುರು-ಶುಭ ದಿನಗಳು.

## ವಿಶೇಷ ದಿನಗಳು:

**ದಿನಾಂಕ: 24.3.2024 ನೇ ಭಾನುವಾರ ಕಾಮದಹನ, ದಿನಾಂಕ: 25.3.2024ನೇ ಸೋಮವಾರ ಹೋಳಿ ಹುಣ್ಣಿಮೆ, ದಿನಾಂಕ: 26.3.2024 ನೇ ಮಂಗಳವಾರ ಶ್ರೀ ಸತ್ಯಬೋಧ ತೀರ್ಥರ ಆರಾಧನೆ (ಸವಣೂರು).**
**ದಿನಾಂಕ: 28.3.2024 ನೇ ಗುರುವಾರ ಶ್ರೀ ವಾದಿರಾಜ ತೀರ್ಥರ ಮಧ್ಯಾರಾಧನೆ ( ಶ್ರೀ ಕ್ಷೇತ್ರ ಸೋಂದಾ) ಸಂಕಷ್ಟ ಚತುರ್ಥೀ ಚಂದ್ರೋದಯ ರಾತ್ರಿ 9.21ಕ್ಕೆ, ದಿನಾಂಕ: 29.3.2024 ನೇ ಶುಕ್ರವಾರ ಶ್ರೀ ವ್ಯಾಸತೀರ್ಥರ ಆರಾಧನೆ.**

# ಲೋಕಸಭಾ ಚುನಾವಣೆ ವಾರ್ ರೂಂ ಪರಿಶೀಲನೆ



**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ಮತದಾರರ ಪಟ್ಟಿ ನೋಡಲ್ ಅಧಿಕಾರಿ ಗುಂಜನ್ ಕೃಷ್ಣ ಭೇಟಿ**

ದಾವಣಗೆರೆ, ಮಾ. 23 - ಲೋಕಸಭಾ ಚುನಾವಣೆ ನಡೆಯುತ್ತಿದ್ದು ಚುನಾವಣಾ ಕಾರ್ಯಗಳ ವೀಕ್ಷಣೆ ಮತ್ತು ನಿಯಂತ್ರಣಕ್ಕಾಗಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ವಾರ್ ರೂಂ ಸ್ಥಾಪಿಸಲಾಗಿದ್ದು, ಶುಕ್ರವಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಹಾಗೂ ಮತದಾರರ ಪಟ್ಟಿ ಜಿಲ್ಲಾ ನೋಡಲ್ ಅಧಿಕಾರಿಯಾದ ಗುಂಜನ್ ಕೃಷ್ಣ ಅವರು ವಾರ್ ರೂಂಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ವಾರ್ ರೂಂನಲ್ಲಿ ಎಲ್ಲಾ ವಿದ್ಯುನ್ಮಾನ ಮಾಧ್ಯಮಗಳ ವೀಕ್ಷಣೆಗಾಗಿ ಟಿ.ವಿ ಅಳವಡಿಕೆ, ಸ್ಥಳೀಯ ಲೋಕಲ್ ಚಾನೆಲ್‌ಗಳ ವೀಕ್ಷಣೆ, ಸಾಮಾಜಿಕ ಜಾಲತಾಣ ವೀಕ್ಷಣೆಗಾಗಿ ಮತ್ತು ಪ್ರತಿ ತಾಲ್ಲೂಕಿಗೆ ಚುನಾವಣಾ ಕಾರ್ಯಗಳ ವೀಕ್ಷಣಾ ವರದಿಗಾಗಿ ತಾಲ್ಲೂಕಿಗೆ ಒಬ್ಬರಂತೆ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ವಾರ್ ರೂಂ ಕಾರ್ಯವೈಖರಿ ಬಗ್ಗೆ ಪರಿಶೀಲನೆ ನಡೆಸಿದರು.

**ಮತದಾರರಿಗೆ ಸಹಾಯ :** ಮತದಾರರಿಗೆ ಮಾಹಿತಿ ಹಾಗೂ ಸಹಾಯಕ್ಕಾಗಿ 1950 ಕರೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಈ ಸಂಖ್ಯೆಗೆ ದಿನ 24 ಗಂಟೆಯು ಕರೆ ಮಾಡಿ ಮಾಹಿತಿ ಮತ್ತು ಸಹಾಯ ಪಡೆಯಬಹುದಾಗಿದೆ. ಮತದಾರರು ವಿಹೆಚ್‌ಎ ಆಪ್ ಡೌನ್‌ಲೋಡ್ ಮಾಡಿಕೊಂಡು ಮತದಾರರ ಪಟ್ಟಿಯಲ್ಲಿ ಹೆಸರು ಪರಿಶೀಲನೆ ಮಾಡಿಕೊಳ್ಳಬಹುದು ಅಥವಾ 1950 ಸಂಖ್ಯೆಗೆ ಕರೆ ಮಾಡಬಹುದಾಗಿದೆ ಎಂದರು.

ಈ ವೇಳೆ ಅಪರ ಜಿಲ್ಲಾಧಿಕಾರಿ ಸೈಯದಾ ಅಫ್ರಿನ್ ಬಾನು ಎಸ್.ಬಳ್ಳಾರಿ, ಸ್ಮಾರ್ಟ್ ಸಿಟಿ ಎಂ.ಡಿ.ವೀರೇಶ್ ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಇಂದು ಆಸ್ಪತ್ರೆಯಿಂದ ಕುಮಾರಸ್ವಾಮಿ ಬಿಡುಗಡೆ



ಬೆಂಗಳೂರು, ಮಾ. 23 - ಚೆನ್ನೈನಲ್ಲಿ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಆಸ್ಪತ್ರೆಯಿಂದ ಭಾನುವಾರ ಡಿಸ್‌ಚಾರ್ಜ್ ಆಗಲಿದ್ದಾರೆ.

ಮಾರ್ಚ್ 21ರಂದು ಖ್ಯಾತ ಹೃದಯ ತಜ್ಞ ಡಾ. ಸಿ.ಎನ್. ಮಂಜುನಾಥ್ ಅವರ ಮಾರ್ಗದರ್ಶನದಲ್ಲಿ ವಿದೇಶಿ ವೈದ್ಯರ ತಂಡವು ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಯಶಸ್ವಿ ಶಸ್ತ್ರಚಿಕಿತ್ಸೆ ಮಾಡಿತ್ತು.

ಎರಡು ದಿನಗಳ ಕಾಲ ತೀವ್ರ ನಿಗಾ ಘಟಕದಲ್ಲಿದ್ದ ಕುಮಾರಸ್ವಾಮಿ ಅವರು ವಾರ್ಡ್‌ಗೆ ಶಿಫ್ಟ್ ಆಗಿದ್ದಾರೆ. ಒಂದು ದಿನದ ಮಟ್ಟಿಗೆ ವಿಶ್ರಾಂತಿ ಪಡೆದು ಭಾನುವಾರ ಮನೆಗೆ ಹಿಂದಿರುಗಲಿದ್ದಾರೆ.

ಕುಮಾರಸ್ವಾಮಿ ಅವರಿಗೆ ಮೂರನೇ ಬಾರಿಗೆ ಹೃದಯ ಕವಾಟಗಳನ್ನು ಬದಲಾವಣೆ ಮಾಡಲಾಗಿದೆ. ತೆರೆದ ಹೃದಯ ಶಸ್ತ್ರಚಿಕಿತ್ಸೆ ಮಾಡಿದ್ದಲ್ಲಿ ಕುಮಾರಸ್ವಾಮಿ ಅವರು ಲೋಕಸಭಾ ಚುನಾವಣೆಯಿಂದ ದೂರ ಉಳಿದು ಮೂರು ತಿಂಗಳ ಕಾಲ ವಿಶ್ರಾಂತಿ ಪಡೆಯಬೇಕಿತ್ತು.

ಅತ್ಯಾಧುನಿಕ ತಂತ್ರಜ್ಞಾನ ಬಳಸಿ, ಮೂಳೆ ಮತ್ತು ಮಾಂಸಕ್ಕೆ ಯಾವುದೇ ರೀತಿಯಲ್ಲಿ ಧಕ್ಕೆಯಾಗದಂತೆ ರಕ್ತ ನಾಳದ ಮೂಲಕವೇ ಎರಡು ಕವಾಟಗಳನ್ನು ಬದಲಾಯಿಸಿರುವುದರಿಂದ ಕುಮಾರಸ್ವಾಮಿ ಅವರಿಗೆ ನಾಲ್ಕೈದು ದಿನಗಳಿಗಿಂತ ಹೆಚ್ಚಿನ ವಿಶ್ರಾಂತಿ ಅಗತ್ಯವಿಲ್ಲ.

ಮುಂದಿನ ಬುಧವಾರದಿಂದ ಅವರು ಸಕ್ರಿಯವಾಗಿ ತಮ್ಮನ್ನು ಚುನಾವಣೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಮಂಡ್ಯದಿಂದ ಚುನಾವಣಾ ಸ್ಪರ್ಧೆಗಿಳಿಯಬೇಕು ಎಂದು ಜೆಡಿಎಸ್ ಕಾರ್ಯಕರ್ತರ ಒತ್ತಡ ಇರುವ ಹಿನ್ನೆಲೆಯಲ್ಲಿ ಆ ಜಿಲ್ಲೆಯ ಪ್ರಮುಖರೊಂದಿಗೆ ಸಮಾಲೋಚನೆ ನಡೆಸಲಿದ್ದಾರೆ.

# ಬರ ನಿರ್ವಹಣೆಯಲ್ಲಿ ರಾಜ್ಯ ಪೂರ್ಣ ವಿಫಲ : ವಿಜಯೇಂದ್ರ

**(1ನೇ ಪುಟದಿಂದ)** ಹೇಳುತ್ತಾರೆ. ಕಾವೇರಿ ನೀರನ್ನು ತಮಿಳುನಾಡಿಗೆ ಯಥೇಚ್ಛವಾಗಿ ಹರಿಸುವಾಗ ಈ ಆಲೋಚನೆ ಮಾಡಿದ್ದರೆ ಪರಿಸ್ಥಿತಿ ಇಷ್ಟು ಕೆಡುತ್ತಿರಲಿಲ್ಲ, ನೀರಿಗಾಗಿ ಹಾಹಾಕಾರ ಇರುತ್ತಿರಲಿಲ್ಲ ಎಂದರು.

ಕಾಂಗ್ರೆಸ್ ಆಡಳಿತದಲ್ಲಿ ಅಭಿವೃದ್ಧಿ ಶೂನ್ಯವಾಗಿದೆ, ಅಲ್ಪಸಂಖ್ಯಾತರ ತುಷ್ಟೀಕರಣ ಮಾಡುತ್ತಲೇ ಬಂದಿದೆ. ಲೋಕಸಭಾ ಚುನಾವಣೆಯಲ್ಲಿ ಇದಕ್ಕೆ ತಕ್ಕ ಉತ್ತರ ಕೊಡುವ ಕಾಲ ಬಂದಿದೆ.

ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು 10 ವರ್ಷಗಳು ಕಳೆದ ಮೇಲೂ ಪ್ರಧಾನಮಂತ್ರಿ ನರೇಂದ್ರ ಮೋದಿ ಜನಪ್ರಿಯತೆ ಇನ್ನೂ ಉತ್ತುಂಗಕ್ಕೆ ಏರಿದೆ.

ದೇಶದ ಜನತೆ ಪ್ರಧಾನಿ ಮೋದಿ ನಾಯಕತ್ವ ಮೆಚ್ಚಿಕೊಂಡಿದ್ದಾರೆ, ಕೇಂದ್ರ ಸರ್ಕಾರದ ಯೋಜನೆಗಳು ಮನೆ ಮನೆಗೆ ತಲುಪಿವೆ, ಅಭಿವೃದ್ಧಿ ರಾಷ್ಟ್ರವನ್ನಾಗಿ ಪರಿವರ್ತಿಸುವ ಸಂಕಲ್ಪದೊಂದಿಗೆ ಜನಪರ ಯೋಜನೆಗಳನ್ನು ಜಾರಿಗೆ ತಂದಿದೆ.

ಕರ್ನಾಟಕವು ದಕ್ಷಿಣ ಭಾರತದ ಬಿಜೆಪಿಯ ಹೆಬ್ಬಾಗಿಲು ಎಂಬುದನ್ನು ನಾವು ಮತ್ತೆ ಸಾಬೀತು ಮಾಡಬೇಕಿದೆ. ರಾಜ್ಯದಲ್ಲಿ ಬಿಜೆಪಿ ಆಡಳಿತದ ಸಂದರ್ಭದಲ್ಲಿ ನೀಡಿದ ಕೊಡುಗೆಗಳು, ಕಾರ್ಯಕ್ರಮಗಳು, ಜನಪರ ಯೋಜನೆಗಳನ್ನು ಜನತೆ ಮರೆತಿಲ್ಲ ಎಂದರು.

# ಪಂಚ ದೇವರುಗಳ ಆಶೀರ್ವಾದ ಪಡೆದ ಗಾಯತ್ರಿ ಸಿದ್ಧೇಶ್ವರ



ದಾವಣಗೆರೆ, ಮಾ. 23- ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರು ಶನಿವಾರ ನಿಟ್ಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಿ ದೇವಾಲಯ ಕ್ಕೆ ಭೇಟಿ ನೀಡಿದ ಗಾಯತ್ರಿ ಸಿದ್ದೇಶ್ವರ, ದೇವಿ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಬಳಿಕ ಸಮೀಪದಲ್ಲೇ ಇದ್ದ ಶ್ರೀ ಗಣಪತಿ ದೇವಸ್ಥಾನ, ಗಂಗಾಪರಮೇಶ್ವರಿ ದೇವಸ್ಥಾನ, ಆಂಜನೇಯ ಸ್ವಾಮಿ ದೇವಸ್ಥಾನ ಹಾಗೂ ಬನಶಂಕರಿ ದೇವಾಲಯಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು. ಬಳಿಕ ನಿಟ್ಟುವಳ್ಳಿಯಲ್ಲಿರುವ ನಾಯಕ ಸಮಾಜದ ಹಾಗೂ ಜೆಡಿಎಸ್ ಹಿರಿಯ ಮುಖಂಡ ಚಂದ್ರಶೇಖರಪ್ಪ ಅವರ ನಿವಾಸಕ್ಕೆ ಭೇಟಿ ನೀಡಿ ಯೋಗಕ್ಷೇಮ ವಿಚಾರಿಸಿದ ಅವರು ಚಂದ್ರಶೇಖರಪ್ಪ ಕುಟುಂಬದ ಸನ್ಮಾನ ಸ್ವೀಕರಿಸಿದರು.

ಈ ವೇಳೆ ಎಚ್ .ರಾ ಜು , ಲೋಕೇಶ್, ರವಿಕುಮಾರ್, ದುರ್ಗೇಶ್ ಜೊತೆಯಲ್ಲಿದ್ದರು. ಸರಸ್ವತಿ ಬಡಾವಣೆ ರಸ್ತೆಯಲ್ಲಿರುವ ಕುಂಬಾರ ಸಿದ್ದಪ್ಪ ಮತ್ತು ಹನುಮಂತಪ್ಪ ನಿ ವಾ ಸಕ್ಕೆ ಭೇಟಿ ನೀಡಿ ಮಾತುಕತೆ ನ ಡೆಸಿದರು. ಕುಂಬಾರ ಸಮಾಜದ ಹನು ಮಂ ತಪ್ಪ, ಜಯಪ್ಪ, ಚಂದ್ರಣ್ಣ, ಗ ದಿಗೆಪ್ಪ, ನಾಗರಾಜ ಜೊತೆಯಲ್ಲಿ ದ್ದ ರು. ದಾವಣಗೆರೆ ಸಮೀಪದ ದೊಡ್ಡಬಾತಿ ಗ್ರಾಮದ ಶ್ರೀ ರೇವಣಸಿದ್ದೇಶ್ವರ ಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ, ದೇವರ ದರ್ಶನ ಪ ಡೆದರು. ಈ ವೇಳೆ ದೇ ವಸ್ಥಾನ ಕಮಿಟಿಯಿಂದ ಗಾಯತ್ರಿ ಸಿದ್ದೇಶ್ವರ ಅ ವರಿಗೆ ಸನ್ಮಾನಿಸಿ ಗೌ ರವಿಸಿದರು. ಗಾಂಜರ್ ಸಂತೋಷ, ಡಿ.ಎ. ವೀರೇಶ್ ಮತ್ತು ದೊಡ್ಡ ಬಾತಿ ಗ್ರಾಮಸ್ಥರು, ಮುಖಂಡರು ಇದ್ದರು.

# ಜೈಲಿನಲ್ಲೇ ದೆಹಲಿ ಸರ್ಕಾರ ನಡೆಸಲು ಕೋರ್ಟ್‌ಗೆ ಮನವಿ : ಮಾನ್

ನವದೆಹಲಿ, ಮಾ. 23 – ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಜೈಲಿನಿಂದಲೇ ಸರ್ಕಾರ ನಡೆಸಲು, ಜೈಲಿನಲ್ಲೇ ತಮ್ಮ ಕಚೇರಿ ತೆರೆಯಲು ಅವಕಾಶ ಕೋರಿ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗುವುದು ಎಂದು ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ತಿಳಿಸಿದ್ದಾರೆ.

ಜೈಲಿನಲ್ಲಿ ಸರ್ಕಾರ ನಡೆಸಬಾರದು ಎಂದು ಎಲ್ಲಿಯೂ ಬರೆದಿಲ್ಲ ಎಂದೂ ಮಾನ್ ಹೇಳಿದ್ದಾರೆ. ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಸಿಲುಕಿದ ಕೇಜ್ರಿವಾಲ್‌ರನ್ನು ಜಾರಿ ನಿರ್ದೇಶನಾಲಯ ಬಂಧಿಸಿದೆ. ಅವರನ್ನು ಮಾರ್ಚ್ 28ರವರೆಗೆ ಕಸ್ಟಡಿಗೆ ನೀಡಲಾಗಿದೆ. ಕೇಜ್ರಿವಾಲ್ ನಿರಪರಾಧ ಸಾಬೀತಾಗುವವರೆಗೂ ಅವರು ಜೈಲಿನಿಂದಲೇ ಕಾರ್ಯನಿರ್ವಹಿಸಬಹುದು ಎಂದು ಕಾನೂನು ಹೇಳುತ್ತದೆ. ನಾವು ಜೈಲಿನಲ್ಲೇ ಕಚೇರಿ ತೆರೆಯಲು ಸುಪ್ರೀಂ ಕೋರ್ಟ್, ಹೈಕೋರ್ಟ್‌ನಿಂದ ಅನುಮತಿ ಪಡೆಯುತ್ತೇವೆ. ದೆಹಲಿ ಸರ್ಕಾರ ಕಾರ್ಯನಿರ್ವಹಿಸಲಿದೆ ಎಂದು ಮಾನ್ ಹೇಳಿದ್ದಾರೆ.

## ಗ್ಯಾರಂಟಿಗಳನ್ನು ಕದ್ದು ರಾಜಕೀಯ

**(1ನೇ ಪುಟದಿಂದ)** ಅತ್ಯಂತ ಹೆಚ್ಚು ಸುಳ್ಳು ಹೇಳಿದವರು ಪ್ರಧಾನಿ ಮೋದಿ, ಈಗ ನಮ್ಮ ಗ್ಯಾರಂಟಿಗಳನ್ನು ಕದ್ದು ಅದಕ್ಕೆ ಮೋದಿ ಗ್ಯಾರಂಟಿ ಎಂದು ಹೆಸರಿಟ್ಟಿದ್ದಾರೆ ಎಂದು ವ್ಯಂಗ್ಯವಾಡಿದರು.

ನಮ್ಮ ಗ್ಯಾರಂಟಿ ಯೋಜನೆಗಳು ಎಲ್ಲಾ ಧರ್ಮ, ಎಲ್ಲಾ ಜಾತಿ, ಎಲ್ಲಾ ವರ್ಗದವರಿಗೆ ಸೇರಿವೆ. ಸರ್ವರನ್ನೂ ಸಮಾನವಾಗಿ ಕಾಣುವ ಕಾರ್ಯಕ್ರಮಗಳನ್ನು ನಮ್ಮ ಕಾಂಗ್ರೆಸ್ ಸರ್ಕಾರ ರೂಪಿಸುತ್ತಿದೆ, ಜಾರಿ ಮಾಡುತ್ತಿದೆ. ಇವೆಲ್ಲವನ್ನೂ ನೀವುಗಳು ನಾಡಿನ ಜನರಿಗೆ ಸರಿಯಾಗಿ ಅರ್ಥ ಮಾಡಿಸಿ, ಬಿಜೆಪಿಯ ಸುಳ್ಳುಗಳಿಗೆ ತಕ್ಕ ಸತ್ಯದ ದಾಖಲೆಗಳನ್ನು ಮಂಡಿಸಿ ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಉಪಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್, ಹಸಿವು ಮುಕ್ತ ರಾಜ್ಯ ಮಾಡಲು ಅನ್ನಭಾಗ್ಯ ಯೋಜನೆ ಮೂಲಕ 10 ಕೆ.ಜಿ. ಅಕ್ಕಿ ನೀಡುವ ಘೋಷಣೆ ಮಾಡಿದೆವು. ನಾವು ಅಕ್ಕಿ ಖರೀದಿ ಮಾಡಲು ಕೇಂದ್ರಕ್ಕೆ ಮನವಿ ಮಾಡಿದರೆ, ಕೇಂದ್ರ ಸರ್ಕಾರ ನಿರಾಕರಿಸಿತು. ನಮ್ಮ ಸರ್ಕಾರವೇ 5 ಕೆ.ಜಿ. ಅಕ್ಕಿ ಹಾಗೂ ಉಳಿದ 5 ಕೆ.ಜಿ. ಅಕ್ಕಿಯ ಹಣವನ್ನು ನೀಡುತ್ತಿದೆ.

ಬಿಜೆಪಿ ಆಡಳಿತದಲ್ಲಿ ಪೆಟ್ರೋಲ್ ಬೆಲೆ 70 ರಿಂದ 110 ರೂ.ಗೆ ಏರಿತು. ಅಡುಗೆ ಅನಿಲ 410 ರಿಂದ 1100 ರೂ. ಆಯಿತು. ಅಡುಗೆ ಎಣ್ಣೆ 200 ರೂ. ಗಡಿ ದಾಟಿತು. ಅಗತ್ಯ ವಸ್ತುಗಳ ಬೆಲೆ ಏರಿಕೆ ಸಮಯದಲ್ಲಿ ಮಹಿಳೆಯರಿಗೆ ನೆರವಾಗಬೇಕೆಂದು ಗೃಹಲಕ್ಷ್ಮಿ ಯೋಜನೆ ಘೋಷಣೆ ಮಾಡಿದೆವು. ಇಂದು 1.33 ಕೋಟಿ ಮನೆಯೊಡತಿಯರಿಗೆ ಪ್ರತಿ ತಿಂಗಳು 2 ಸಾವಿರ ಹಣ ನೀಡಲಾಗುತ್ತಿದೆ ಎಂದರು.

## ಕೋಲಾರ, ಹಾಸನ, ಮಂಡ್ಯ ಕ್ಷೇತ್ರಗಳು

**(1ನೇ ಪುಟದಿಂದ)** ರಾಜ್ಯ ಚುನಾವಣಾ ಉಸ್ತುವಾರಿ ವಹಿಸಿಕೊಂಡಿರುವ ರಾಧಾ ಮೋಹನ್ ದಾಸ್ ಅಗರ್‌ವಾಲ್ ಎನ್‌ಡಿಎ ಮೈತ್ರಿ ಕೂಟದ ಕ್ಷೇತ್ರ ಹಂಚಿಕೆಯನ್ನು ಅಧಿಕೃತವಾಗಿ ಘೋಷಣೆ ಮಾಡಿದ್ದಾರೆ.

ಅರಮನೆ ಆವರಣದಲ್ಲಿ ಬಿಜೆಪಿ ರಾಜ್ಯ ಚುನಾವಣಾ ನಿರ್ವಹಣಾ ಸಮಿತಿಯ ಕಾರ್ಯಾಗಾರದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕೋಲಾರ ಲೋಕಸಭಾ ಕ್ಷೇತ್ರವನ್ನು ಮಿತ್ರ ಪಕ್ಷ ಜೆಡಿಎಸ್‌ಗೆ ಬಿಟ್ಟುಕೊಟ್ಟಿರುವುದಾಗಿ ಅಧಿಕೃತ ಘೋಷಣೆ ಮಾಡಿದರು.

ಉಳಿದ 25 ಕ್ಷೇತ್ರಗಳಲ್ಲಿ ನಾವು ಸ್ಪರ್ಧಿಸುತ್ತಿದ್ದು, ಉಭಯ ಪಕ್ಷಗಳ ಮುಖಂಡರು, ಕಾರ್ಯಕರ್ತರು ಇಂದಿನಿಂದಲೇ ಚುನಾವಣಾ ಹೋರಾಟ ನಡೆಸಿ, ಎಲ್ಲಾ ಕ್ಷೇತ್ರಗಳಲ್ಲೂ ಗೆಲುವು ಸಾಧಿಸಬೇಕೆಂದರು.

ವೈಯಕ್ತಿಕ ಭಿನ್ನಾಭಿಪ್ರಾಯಗಳನ್ನು ಮರೆತು ಪಕ್ಷದ ಅಧಿಕೃತ ಅಭ್ಯರ್ಥಿಗಳ ಪರ ಕೆಲಸ ಮಾಡಿ, ಇಲ್ಲದಿದ್ದರೆ ಕಠಿಣ ಕ್ರಮಕ್ಕೆ ಒಳಗಾಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

# ರಾಣೇಬೆನ್ನೂರು : 4 ದಿನಗಳೊಳಗಾಗಿ ನೀರು ಹರಿಸದಿದ್ದರೆ ಹೆದ್ದಾರಿ ತಡೆದು ಪ್ರತಿಭಟನೆ



ರಾಣೇಬೆನ್ನೂರು, ಮಾ.23- ಡ್ರಿಂಕಿಂಗ್ ವಾಟರ್ ಎಮರ್ಜೆನ್ಸಿ (ತುರ್ತು ಜೀವಜಲ ಪರಿಸ್ಥಿತಿ) ಎಂದು ಘೋಷಿಸಿ ಭದ್ರಾ ಡ್ಯಾಂನಿಂದ ಕನಿಷ್ಠ 2 ಟಿ.ಎಂ.ಸಿ. ನೀರನ್ನು ತುಂಗಭದ್ರಾ ನದಿಗೆ ಹರಿಸದಿದ್ದರೆ ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಿ, ಉಗ್ರ ಪ್ರತಿಭಟನೆ ಮಾಡಲಾಗುವುದೆಂದು ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ ಜಿಲ್ಲಾಡಳಿತಕ್ಕೆ ಎಚ್ಚರಿಸಿದರು.

ಉತ್ತರ ಕರ್ನಾಟಕದ ಹೆಬ್ಬಾಗಿಲು ಮಾಕನೂರು ಕ್ರಾಸ್ ಹತ್ತಿರ ತುಂಗಭದ್ರಾ ನದಿಗೆ ನೀರು ಹರಿಸು ವಂತೆ ಒತ್ತಾಯಿಸಿ ಇಂದು ಹಮ್ಮಿಕೊಂಡ ಚಳವಳಿಯ ನೇತೃತ್ವ ವಹಿಸಿ ಅವರು ಮಾತನಾಡಿದರು.

ಭದ್ರಾ ಡ್ಯಾಂನಿಂದ ನಾವು ಕೇಳುತ್ತಿರುವ ನೀರು ಕೃಷಿ ಚಟುವಟಿಕೆಗೆ ಅಲ್ಲಾ, ಕುಡಿಯಲು ನೀರಿಲ್ಲದೆ ಬಾಯಾರಿಕೆಯಿಂದ ಬಳಲುತ್ತಿರುವ ಜೀವ ಸಂಕುಲಕ್ಕೆ, ಪಶು ಪಕ್ಷಿಗಳಿಗೆ, ವನ್ಯ ಜೀವಿಗಳಿಗೆ, ಜಲಚರ ಜೀವಿಗಳಿಗೆ ಮತ್ತು ಜನರಿಗೆ ಎಂದರು.

ನೇತೃತ್ವ ವಹಿಸಿದ್ದ ಇನ್ನೊಬ್ಬ ರೈತ ಮುಖಂಡ ಜಿಲ್ಲಾಧ್ಯಕ್ಷ ಈರಣ್ಣ ಹಲಗೇರಿ ಮಾತನಾಡಿ, ಚುನಾವಣೆಯ ನೀತಿ ಸಂಹಿತೆ, ಕರ್ತವ್ಯದ ನೆಪ ಹೇಳಿ ಅಧಿಕಾರಿಗಳು ನೀರು ಬಿಡುವ ವಿಚಾರದಲ್ಲಿ ನಿರ್ಲಕ್ಷ್ಯ ಮಾಡಿದಲ್ಲಿ ಸಂಬಂಧಿಸಿದ ಅಧಿಕಾರಿಗಳ ಕಚೇರಿಗೆ ಬೀಗ ಹಾಕಿ ಪ್ರತಿಭಟಿಸಲಾಗುವುದೆಂದರು.

ಸ್ಥಳಕ್ಕೆ ಆಗಮಿಸಿದ ಉಪವಿಭಾಗಾಧಿಕಾರಿ ಹೆಚ್.ಬಿ. ಚೆನ್ನಪ್ಪ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿ, ನಿಮ್ಮ ಸಮಸ್ಯೆ ನಮಗೆ ಅರ್ಥವಾಗುತ್ತದೆ. ಶೀಘ್ರದಲ್ಲೇ ಅಧಿಕಾರಿಗಳ ಸಭೆ ಕರೆದು ನೀರು ಬಿಡುವ ಬಗ್ಗೆ ತೀರ್ಮಾನಿಸಲಾಗುವುದೆಂದು ಹೇಳಿದರು.

ಈ ಹೇಳಿಕೆಗೆ ಒಪ್ಪದ ರೈತರು ಸ್ಪಷ್ಟವಾಗಿ ಈ ಬಗ್ಗೆ ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿ, ಈ ಬಗ್ಗೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ಸಂಪೂರ್ಣ 'ಡಾಟಾ' ಒದಗಿಸಬೇಕೆಂದು ಪಟ್ಟು ಹಿಡಿದರು.

ನಂತರ 1 ತಾಸು ಸಮಯ ತೆಗೆದುಕೊಂಡ ಅಸಿಸ್ಟೆಂಟ್ ಕಮೀಷನರ್ ಹೆಚ್. ಬಿ. ಚೆನ್ನಪ್ಪ ಇವರು ಜಿಲ್ಲಾಧಿಕಾರಿಗಳೊಂದಿಗೆ ಮುಕ್ತವಾಗಿ ಚರ್ಚಿಸಿ ನಂತರ ರೈತರ ಸಭೆಯ ಗಮನಕ್ಕೆ ತಂದರು. ಆಗ ನಾಲ್ಕು ದಿನ ಕಾಲಾವಕಾಶ ಪಡೆದು ಕೊಂಡ ರೈತರು ಸಮಸ್ಯೆ ಬಿಗಡಾಯಿಸಿದ ಬಗ್ಗೆ ನೀರಿನ ಹಾಹಾಕಾರದ ಬಗ್ಗೆ ನಿರ್ಲಕ್ಷಿಸಿದರೆ ಮುಂದೆ ಆಗುವ ಉಗ್ರ ಚಳವಳಿಯ ಬಗ್ಗೆ ಮನವಿ ಅರ್ಪಿಸಿದರು.

ತಹಶೀಲ್ದಾರ್ ಸುರೇಶ್‌ಕುಮಾರ್, ಗ್ರಾಮೀಣ ಪಿ.ಎಸ್.ಐ. ಪ್ರವೀಣಕುಮಾರ್, ಶಹರ ಸಿ.ಪಿ.ಐ. ಶಂಕರ್ ಎಸ್.ಕೆ., ಗ್ರಾಮೀಣ ಸಿ.ಪಿ.ಐ. ಶಿದ್ದೇಶ ಎಂ.ಡಿ., ಕುಮಾರಪಟ್ಟಣಂ ಪಿ.ಎಸ್.ಐ. ಪ್ರವೀಣ ವಾಲೀಕಾರ, ಹಲಗೇರಿ ಪಿ.ಎಸ್.ಐ. ಪರಶುರಾಮ ಲಮಾಣಿ ತಮ್ಮ ನೂರಾರು ಸಿಬ್ಬಂದಿಗಳೊಂದಿಗೆ ಮೊಕ್ಕಾಂ ಹೂಡಿ, ಯಾವುದೇ ಅಹಿತಕರ ಘಟನೆ ಜರುಗದಂತೆ ಎಚ್ಚರ ವಹಿಸಿದ್ದರು.

## ವಿಶ್ವಕರ್ಮ ಸಮಾಜದಿಂದ ಸಾಮೂಹಿಕ ಉಪನಯನ, ವಿವಾಹ ಮಹೋತ್ಸವ

ದಾವಣಗೆರೆ, ಮಾ.23- ವಿಶ್ವಕರ್ಮ ಸಮಾಜದಿಂದ ಏಪ್ರಿಲ್ 26ರಂದು ಕಾಳಿಕಾಂಬ ವಿಶ್ವಕರ್ಮ ಕಲ್ಯಾಣ ಮಂಟಪದಲ್ಲಿ 41ನೇ ವರ್ಷದ, ಉಪನಯನ ಮತ್ತು ಸಾಮೂಹಿಕ ವಿವಾಹ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಅಂದು ಬೆಳಗ್ಗೆ 9.30ರಿಂದ 10.30ರ ವರೆಗೆ ಬ್ರಹ್ಮೋಪದೇಶ, 10.30ರಿಂದ 11.30ರ ಸಮಯದಲ್ಲಿ ಸಾಮೂಹಿಕ ವಿವಾಹ ನಡೆಯಲಿದೆ. ವಿವಾಹ ಮತ್ತು ಉಪನಯನ ಆಗ ಬಯಸುವವರು ಮೊ: 9448127640, 9880342765 ಸಂಪರ್ಕಿಸಿ ಹೆಸರು ನೋಂದಾಯಿಸಬಹುದು.

## ಪಂಜಾಬ್ : ಕಳ್ಳಭಟ್ಟಿ ದುರಂತ; 20 ಸಾವು

ಚಂಡೀಘಡ, ಮಾ. 23 – ಪಂಜಾಬ್‌ನ ಸಂಗ್ರೂರಿನಲ್ಲಿ ನಡೆದ ಕಳ್ಳಭಟ್ಟಿ ದುರಂತದಲ್ಲಿ ಮೃತರ ಸಂಖ್ಯೆ 20ಕ್ಕೆ ತಲುಪಿದೆ. ಈ ಘಟನೆಯ ಬಗ್ಗೆ ಪಂಜಾಬ್ ಮುಖ್ಯ ಕಾರ್ಯದರ್ಶಿ ಹಾಗೂ ಪೊಲೀಸ್ ಮುಖ್ಯಸ್ಥರು ವರದಿ ನೀಡಬೇಕೆಂದು ಚುನಾವಣಾ ಆಯೋಗ ತಿಳಿಸಿದೆ. ಮಿಥೆನಾಲ್ ಹೊಂದಿದ್ದ ಮದ್ಯವನ್ನು ಬಳಸಿ ಕಳ್ಳಭಟ್ಟಿ ತಯಾರಿಸಲಾಗಿತ್ತು. ಈ ಪ್ರಕರಣದಲ್ಲಿ ಭಾಗಿಯಾದ 10 ಜನರನ್ನು ಗುರುತಿಸಲಾಗಿದ್ದು, ಎಂಟು ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಸ್ವಸ್ಥರಾಗಿರುವ ಹದಿನೇಳು ಜನರು ಪಟಿಯಾಲ ಹಾಗೂ ಸಂಗ್ರೂರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

Saraswati Vidya Samste ®

**S.V.S CONVENT & High School (EM)**
Lenin Nagara , Nittuvalli, Davangera-05

**CARRIER OPPORTUNITIES**
Candidate with relevant Teaching Experience, Fluent in English and must be Qualified for English Medium Only

**RECRUITMENT FOR THE ACADEMIC YEAR-2024-25**

| SL NO | SUBJECT | QUALIFICATION | NO.OF POST |
|---|---|---|---|
| 01. | Kannada | M.A., B.ED., | 03 |
| 02. | English | M.A., B.ED., | 04 |
| 03. | Hindi | M.A., B.ED., | 04 |
| 04. | Mathematics | M.Sc., B.Ed., | 04 |
| 05. | Science | B.Sc.,/M.Sc., B.Ed., CBZ & PCM | 06 |
| 06. | Social Science | M.A.,B.Ed., | 03 |
| 07. | Computer | Tally/Diploma | 03 |
| 08. | PE - Teacher | B.PED. .M.PED. (Male & Female Candidates) | 02 |
| 09. | Driver | With Heavy D.L. | 02 |
| 10. | Activity Teachers | Art/Craft/Yoga | 01 |
| 11. | Group "D" | 7th/10th std | 04 |

**WALK – IN – INTERVIEW**
**Date: March-29/03/2024 Timing: 10.00 am to 01.00 pm**
Candidate may mail their detailed resume with in 8 days.
Email: saraswatividyasamste @gmail.com
**call: 78991 05023**

**ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಚೀಟಿ ನಿಧಿಗಳ ಉಪ ನಿಬಂಧಕರ ನ್ಯಾಯಾಲಯ ದಾವಣಗೆರೆ**
**ಜಿಲ್ಲೆ, ಜಿಲ್ಲಾಡಳಿತ ಭವನ, 2ನೇ ಮಹಡಿ, ಕೊಠಡಿ ಸಂಖ್ಯೆ, 52, 53.**
**ಕರೂರು ಕೈಗಾರಿಕಾ ಪ್ರದೇಶ, ಪಿ.ಬಿ. ರಸ್ತೆ, ದಾವಣಗೆರೆ ಇವರ ಕಾರ್ಯಾಲಯ**

**ದಾವಾಸಂಖ್ಯೆ/ಡಿ.ಆರ್/ಡಿ.ವಿ.ಜಿ/ಚಿಟ್ಸ್/ದಾವಾ ನಂ.57/2023-24**

**ಅರ್ಜಿದಾರರು :** ಶ್ರೀ ಸಾಯಿರಾಂ ಚಿಟ್ ಫಂಡ್ (ರಿ.) 1ನೇ ಮಹಡಿ, ಸಿಟಿ ಸೆಂಟ್ರಲ್ ಹಾಸ್ಪಿಟಲ್ ಎದುರು, ಎ.ವಿ.ಕೆ. ಕಾಲೇಜು ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ. ಇವರ ಪರವಾಗಿ ಪಾಲುದಾರರಾದ ಶ್ರೀ ಬಿ.ಹೆಚ್. ಅಶೋಕ್ ಬಿನ್ ಹನುಮಂತಪ್ಪ ಶ್ರೇಷ್ಠಿ, ವಯಸ್ಸು 53 ವರ್ಷ. **- ವಿರುದ್ಧ**

**ಎದುರುದಾರರು :** ಪರಮೇಶ್ವರಯ್ಯ ಮತ್ತು ಇತರರು

**ನೋಟಿಸ್‌ದಾರರು : (1ನೇ ಎದುರುದಾರರು) :**

1. ಶ್ರೀ ಪರಮೇಶ್ವರಯ್ಯ ಬಿನ್ ಈರಯ್ಯ 127/ಪಿ, ದುರ್ಗಾಂಬಿಕಾ ದೇವಸ್ಥಾನದ ಹತ್ತಿರ, ನಿಟ್ಟುವಳ್ಳಿ, ದಾವಣಗೆರೆ.

**ನೋಟಿಸ್**

**ಸಿ.ಪಿ.ಸಿ ಆದೇಶ 5 ನಿಯಮ 20 ರ ಅಡಿಯಲ್ಲಿ 1ನೇ ಎದುರುದಾರರ ವಿರುದ್ಧ ಅರ್ಜಿದಾರರು ನೀಡಲಾದ ಪತ್ರಿಕಾ ಪ್ರಕಟಣಾ ನೋಟಿಸ್**

ಮೇಲ್ಕಂಡ ವ್ಯಾಜ್ಯದಲ್ಲಿ ಅರ್ಜಿದಾರರು ಎದುರುದಾರರ ವಿರುದ್ಧ ದಾವಾ ಮೊತ್ತ ಮತ್ತು ಈ ನ್ಯಾಯಾಲಯದ ವೆಚ್ಚದ ಹಣದ ವಸೂಲಾತಿಗಾಗಿ ದಾವೆಯನ್ನು ಸಲ್ಲಿಸಿದ್ದು, ಈ ನ್ಯಾಯಾಲಯದಿಂದ ಎದುರುದಾರರಾದ ನಿಮಗೆ ದಿನಾಂಕ:13/02/2024 ರಂದು ಮಧ್ಯಾಹ್ನ 3.00 ಗಂಟೆಗೆ ವಿಚಾರಣೆಗೆ ಹಾಜರಾಗಲು ನೋಂದಣಿ ಅಂಚೆ ಮೂಲಕ ನೋಟಿಸ್ ಕಳಿಸಿದ್ದು, ನಿಮಗೆ ನೋಟಿಸ್ ಜಾರಿ ಆಗದ ಕಾರಣ ಮೇಲ್ಕಂಡ ಎದುರುದಾರರು ದಿನಾಂಕ: 05-04-2024 ರಂದು ಮಧ್ಯಾಹ್ನ 3.00 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಖುದ್ದಾಗಿ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದೆಂದು ಈ ಪತ್ರಿಕಾ ಪ್ರಕಟಣೆ ನೀಡಲಾಗಿದೆ. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದರಿ ವ್ಯಾಜ್ಯವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ತಿಳಿಯಿರಿ.

ಈ ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ದಿನಾಂಕ:22/03/2024ರಂದು ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು
(ಎಸ್. ರುದ್ರಮುನಿ)
**ಸ್ಥಳ :** ದಾವಣಗೆರೆ
**ದಿನಾಂಕ :** 22.03.2024

ನ್ಯಾಯಾಲಯದ ಆದೇಶದ ಮೇರೆಗೆ
**ಚೀಟಿ ನಿಧಿ ಉಪ ನಿಬಂಧಕರು**
ದಾವಣಗೆರೆ ಜಿಲ್ಲೆ, ದಾವಣಗೆರೆ

## ಸಂಕ್ಷಿಪ್ತ ಸುದ್ದಿ

**ಅಬಕಾರಿ ನೀತಿ : ಕವಿತಾ ಕಸ್ಟಡಿ ಅವಧಿ ವಿಸ್ತರಣೆ**
ನವದೆಹಲಿ : ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಅಕ್ರಮ ಹಣ ಪ್ರಕರಣದಲ್ಲಿ ಬಂಧಿತ ಬಿ.ಆರ್.ಎಸ್. ನಾಯಕಿ ಕೆ. ಕವಿತಾ ಅವರ ಕಸ್ಟಡಿ ಅವಧಿಯನ್ನು ಸ್ಥಳೀಯ ನ್ಯಾಯಾಲಯ ಮಾರ್ಚ್ 26ರವರೆಗೆ ವಿಸ್ತರಿಸಿದೆ. ಈ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲರನ್ನೂ ಸಹ ಬಂಧಿಸಲಾಗಿದೆ.

**ದೆಹಲಿ ಎ.ಎ.ಪಿ. ಕಚೇರಿಗೆ ತೆರಳದಂತೆ ತಡೆ : ಆತಿಶಿ**
ನವದೆಹಲಿ : ದೆಹಲಿಯ ಆಮ್ ಆದ್ಮಿ ಪಾರ್ಟಿ ಕಚೇರಿಗೆ ತೆರಳುವ ಮಾರ್ಗಗಳನ್ನು ಎಲ್ಲ ದಿಕ್ಕುಗಳಿಂದ ಮುಚ್ಚಲಾಗಿದೆ. ಈ ಬಗ್ಗೆ ಚುನಾವಣಾ ಆಯೋಗಕ್ಕೆ ದೂರು ನೀಡಲಾಗುವುದು ಎಂದು ದೆಹಲಿ ಸಚಿವೆ ಹಾಗೂ ಆಮ್ ಆದ್ಮಿ ಪಾರ್ಟಿ ನಾಯಕಿ ಆತಿಶಿ ತಿಳಿಸಿದ್ದಾರೆ. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಈ ರೀತಿಯ ಕ್ರಮ ತೆಗೆದುಕೊಳ್ಳುವುದು ಸಮಾನ ಅವಕಾಶಗಳ ನಿರಾಕರಣೆ ಎಂದೂ ಆತಿಶಿ ಹೇಳಿದ್ದಾರೆ. ಆದರೆ, ದೆಹಲಿ ಪೊಲೀಸರು ಈ ಆರೋಪಗಳನ್ನು ತಳ್ಳಿ ಹಾಕಿದ್ದಾರೆ.

**ಪಂಜಾಬ್ ಅಬಕಾರಿ ನೀತಿ ತನಿಖೆಗಾಗಿ ಚುನಾವಣಾ ಆಯೋಗಕ್ಕೆ ಮನವಿ**
ಚಂಡೀಘಡ : ಪಂಜಾಬ್‌ನ ಅಬಕಾರಿ ನೀತಿಯನ್ನೂ ಸಹ ದೆಹಲಿಯ ಮಾದರಿಯಲ್ಲೇ ರೂಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಇಲ್ಲಿನ ಅಬಕಾರಿ ನೀತಿಯ ಬಗ್ಗೆ ಜಾರಿ ನಿರ್ದೇಶನಾಲಯದ ತನಿಖೆಗೆ ಆದೇಶಿಸಬೇಕು ಎಂದು ಚುನಾವಣಾ ಆಯೋಗಕ್ಕೆ ಪಂಜಾಬ್ ಬಿಜೆಪಿ ಮನವಿ ಸಲ್ಲಿಸಿದೆ. ದೆಹಲಿ ಅಬಕಾರಿ ನೀತಿ ಪ್ರಕರಣದಲ್ಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಬಂಧಿಸಲಾಗಿದೆ.

**ರೈಲಿನಲ್ಲಿ ಜನಿಸಿದ ಮಗುವಿಗೆ ರೈಲಿನ ಹೆಸರಿಟ್ಟ ದಂಪತಿ**
ವಿದಿಶಾ : ಮಧ್ಯ ಪ್ರದೇಶದ ವಿದಿಶಾ ಜಿಲ್ಲೆಯಲ್ಲಿ ಮಹಿಳೆಯೊಬ್ಬರು ಚಲಿಸುತ್ತಿರುವ ರೈಲಿನಲ್ಲಿ ಮಗುವಿಗೆ ಜನ್ಮ ನೀಡಿದ್ದಾರೆ. ಮುಂಬೈನಿಂದ ವಾರಣಾಸಿಗೆ ತೆರಳುತ್ತಿದ್ದ ಕಾಮಯಾನಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಹೆಣ್ಣು ಮಗುವಿನ ಜನನವಾಗಿದೆ. ದಂಪತಿ ಮಗುವಿಗೆ ಈಗ ರೈಲಿನ ಹೆಸರನ್ನೇ ಇಟ್ಟಿದ್ದಾರೆ.

**ಬಿಜೆಪಿ ವಿರುದ್ಧ ಪ್ರಕರಣ ದಾಖಲಿಸಲು ಆಮ್ ಆದ್ಮಿ ಪಾರ್ಟಿ ಆಗ್ರಹ**
ನವದೆಹಲಿ : ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಆರೋಪಿಯಾಗಿರುವ ವ್ಯಕ್ತಿಯಿಂದ ಚುನಾವಣಾ ಬಾಂಡ್ ಮೂಲಕ ಬಿಜೆಪಿ ಕೋಟ್ಯಾಂತರ ರೂಪಾಯಿಗಳನ್ನು ಪಡೆದಿದೆ. ಈ ಹಿನ್ನೆಲೆಯಲ್ಲಿ ಬಿಜೆಪಿ ವಿರುದ್ಧ ಜಾರಿ ನಿರ್ದೇಶನಾಲಯ ಪ್ರಕರಣ ದಾಖಲಿಸಬೇಕು ಎಂದು ಆಮ್ ಆದ್ಮಿ ಪಾರ್ಟಿ ಒತ್ತಾಯಿಸಿದೆ.

**ಮೊಯಿತ್ರ ಮೇಲೆ ಸಿ.ಬಿ.ಐ. ದಾಳಿ**
ನವದೆಹಲಿ : ಸಿ.ಬಿ.ಐ. ತಂಡಗಳು ಶನಿವಾರ ತೃಣಮೂಲ ಕಾಂಗ್ರೆಸ್ ಮಾಜಿ ಸಂಸದೆ ಮೊಹುವಾ ಮೊಯಿತ್ರಗೆ ಸೇರಿದ ಹಲವಾರು ತಾಣಗಳ ಮೇಲೆ ದಾಳಿ ನಡೆಸಿವೆ. ಹಣಕ್ಕಾಗಿ ಸಂಸತ್ತಿನಲ್ಲಿ ಪ್ರಶ್ನೆ ಕೇಳಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಲ್ಕೊತಾ ಸೇರಿ ಹಲವೆಡೆ ದಾಳಿ ನಡೆಸಲಾಗಿದೆ.

**ಮೋದಿ ವಿರುದ್ಧ ಕಾಂಗ್ರೆಸ್‌ನ ಅಜಯ್ ರಾಯ್ ಸ್ಪರ್ಧೆ**
ನವದೆಹಲಿ : ಲೋಕಸಭಾ ಚುನಾವಣೆಗಾಗಿ ಕಾಂಗ್ರೆಸ್ ಪಕ್ಷ ತನ್ನ 46 ಅಭ್ಯರ್ಥಿಗಳ ನಾಲ್ಕನೇ ಪಟ್ಟಿ ಬಿಡುಗಡೆ ಮಾಡಿದೆ. ಉತ್ತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಅಜಯ್ ರಾಯ್ ಅವರು ವಾರಣಾಸಿಯಿಂದ ಸ್ಪರ್ಧಿಸಲಿದ್ದಾರೆ. ಈ ಕ್ಷೇತ್ರದಿಂದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕಣದಲ್ಲಿದ್ದಾರೆ.

**ರಾಜಸ್ಥಾನ : ಅಗ್ನಿ ಅನಾಹುತದಲ್ಲಿ ಆರು ಸಾವು**
ನವದೆಹಲಿ : ರಾಜಸ್ಥಾನದ ಜೈಪುರ ಜಿಲ್ಲೆಯ ರಸಾಯನಿಕ ಕಾರ್ಖಾನೆಯೊಂದರಲ್ಲಿ ಅಗ್ನಿ ಅನಾಹುತ ಸಂಭವಿಸಿ ಆರು ಜನ ಸಾವನ್ನಪ್ಪಿದ್ದಾರೆ.

# ದೊಣೆಹಳ್ಳಿಯಲ್ಲಿ ದಾಸೋಹ ಸಂಸ್ಕೃತಿ ಉತ್ಸವ


ದೊಣೆಹಳ್ಳಿಯಲ್ಲಿ ನಿರ್ಮಾಣವಾಗುತ್ತಿರುವ ಶ್ರೀ ಶರಣ ಬಸವೇಶ್ವರ ನೂತನ ದಾಸೋಹ ಮಠದ ಹೊರಾಂಗಣ




ದಾಸೋಹ ಸಂಸ್ಕೃತಿ ಉತ್ಸವ

## ಶ್ರೀ ಶರಣ ಬಸವೇಶ್ವರ ದಾಸೋಹ ಮಠದಲ್ಲಿ ನಾಳೆಯಿಂದ 5 ದಿನ ಬಹುತ್ವ ಚಿಂತನೆಯ ದಾಸೋಹೋತ್ಸವ

ಜಗಳೂರು, ಮಾ. 23 - ಬಸವಾದಿ ಶಿವಶರಣರ ತತ್ವ, ಸಿದ್ಧಾಂತ ಮತ್ತು ಆಶಯದಂತೆ ಸಾಗುತ್ತಿರುವ ದೊಣೆಹಳ್ಳಿ ಶ್ರೀ ಶರಣ ಬಸವೇಶ್ವರ ದಾಸೋಹ ಮಠದಿಂದ ಪ್ರಪ್ರಥಮ ಬಾರಿಗೆ ದಾಸೋಹ ಸಂಸ್ಕೃತಿ ಉತ್ಸವ ಆರಂಭಿಸಲಾಗಿದೆ. ನಾಡಿದ್ದು ದಿನಾಂಕ 25 ರಿಂದ 29ರವರೆಗೆ ಐದು ದಿನಗಳ ಕಾಲ ಬಹುತ್ವ ಚಿಂತನೆಯ ದಾಸೋಹೋತ್ಸವ ನಡೆಯಲಿದೆ.

ಕಾಯಕಯೋಗಿ ಶ್ರೀ ಗುರು ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿಯ ರಥೋತ್ಸವದ ನಿಮಿತ್ತವಾಗಿ ದೊಣೆಹಳ್ಳಿಯ ಶ್ರೀ ಶರಣ ಬಸವೇಶ್ವರ ದಾಸೋಹ ಮಠವು ಅನಾದಿ ಕಾಲದಿಂದಲೂ ಐದು ದಿನಗಳ ಅನ್ನ ದಾಸೋಹ ಮತ್ತು ವಿಚಾರ ದಾಸೋಹವನ್ನು ಮುನ್ನಡೆಸಿಕೊಂಡು ಬರುತ್ತಿದೆ. ಹಟ್ಟಿ ಜಾತ್ರೆಗೆ ತೆರಳುವ ಭಕ್ತಾದಿಗಳ, ಸಾಧು-ಸಂತರ, ಮಕ್ಕಳು-ಮಹಿಳೆಯರ ಹಸಿವು ತಣಿಸುವುದರ ಜೊತೆಗೆ ಭಜನೆ, ಕೀರ್ತನೆ, ಉಪನ್ಯಾದಂತಹ ಜ್ಞಾನ ದಾಸೋಹವನ್ನು ನಡೆಸಿಕೊಂಡ ಕೀರ್ತಿ ನಮ್ಮ ಶ್ರೀಮಠದ್ದು.

ಈಗ ಬದಲಾಗಿರುವ ಕಾಲಮಾನಕ್ಕೆ ತಕ್ಕಂತೆ ನಮ್ಮ ಹಳೆಯ ಮಠದ ಆವರಣದಲ್ಲಿ ಹೊಸಮಠ (ದೇವಸ್ಥಾನ), ಮಹಾದ್ವಾರ, ದಾಸೋಹ ಭವನ ಮತ್ತು ಶಿಥಿಲಗೊಂಡಿರುವ ಕಲ್ಯಾಣಿಯ ಪುನರುಜ್ಜೀವನಕ್ಕೆ ಕೈ ಹಾಕಿದ್ದು, ಈಗಾಗಲೇ ಶೇ. 60ರಷ್ಟು ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದೆ. ಒಂದು ವರ್ಷದೊಳಗಾಗಿ ಮಠದ ಕಾಮಗಾರಿಗಳನ್ನು ಪೂರ್ಣಗೊಳಿಸುವ ಸಂಕಲ್ಪ ಕೈಗೊಳ್ಳಲಾಗಿದೆ. ಹೀಗಾಗಿ ಹಳೆಯ ಮಠದೊಂದಿಗೆ ಹೊಸ ಮಠಕ್ಕೆ ಹೊಸ ಪರಂಪರೆಯನ್ನು ಕಟ್ಟಿಕೊಡುವ ಬಹುತ್ವದ ಜೀವ ಪರಂಪರೆಯ ಆಶಯದೊಂದಿಗೆ ದಾಸೋಹ ಸಂಸ್ಕೃತಿ ಉತ್ಸವವನ್ನು ಕೈಗೆತ್ತಿಕೊಳ್ಳಲಾಗಿದೆ.

ಬೆಂಗಳೂರಿನ ಸರ್ಪಭೂಷಣ ಶಿವಯೋಗಿಗಳ ಮಠದ ಪಟ್ಟಾಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ದೇವರ ಸಾನ್ನಿಧ್ಯದಲ್ಲಿ ನಾಡಿದ್ದು ದಿನಾಂಕ 25ರ ಸೋಮವಾರ ಷಟ್‌ಸ್ಥಳ ಧ್ವಜಾರೋಹಣದೊಂದಿಗೆ ಉತ್ಸವವನ್ನು ಹಿರಿಯ ಪತ್ರಕರ್ತರಾದ ಚಿತ್ರದುರ್ಗದ ಜಿ.ಎಸ್. ಉಜ್ಜಿನಪ್ಪ ಉದ್ಘಾಟಿಸುವರು. ಶಾಸಕ ಬಿ. ದೇವೇಂದ್ರಪ್ಪ ಅಧ್ಯಕ್ಷತೆ ವಹಿಸುವರು. ಎರಡನೇ ದಿನ ನಾಡಿನ ಹಿರಿಯ ಮಠಾಧೀಶರಾದ ಚಿತ್ರದುರ್ಗದ ಶ್ರೀ ಶಿವಲಿಂಗಾನಂದ ಮಹಾಸ್ವಾಮೀಜಿ ಅಧ್ಯಕ್ಷತೆಯಲ್ಲಿ ಶರಣ ತತ್ವ ಚಿಂತನಾ ಸಮಾವೇಶ ನಡೆಯಲಿದೆ.

ಮೂರನೇ ದಿನ ತಾಲ್ಲೂಕಿನ ಜನತೆಯ ಬದುಕು, ಭವಿಷ್ಯದ ದೃಷ್ಟಿಯಿಂದ ಮಹತ್ವದ ಜಾಗೃತಿ ರೈತ ಸಮಾವೇಶ ಏರ್ಪಡಿಸಲಾಗಿದೆ. ಭದ್ರಾ ಮೇಲ್ದಂಡೆ ನೀರಾವರಿ ಯೋಜನೆ ಶೀಘ್ರ ಅನುಷ್ಠಾನ ಮತ್ತು ಐವತ್ತೇಳು ಕೆರೆಗಳ ನೀರು ತುಂಬಿಸುವ ಕುರಿತಾಗಿ ಹಕ್ಕೊತ್ತಾಯದ ಸಮಾವೇಶ ತಾಲ್ಲೂಕಿನ ಹಿರಿಯ ನೀರಾವರಿ ಹೋರಾಟಗಾರ ತೋರಣಗಟ್ಟೆ ತಿಪ್ಪೇಸ್ವಾಮಿ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಚಿತ್ರದುರ್ಗ, ದಾವಣಗೆರೆ ಮತ್ತು ವಿಜಯನಗರ ಜಿಲ್ಲೆಯ ಪ್ರಮುಖ ರೈತ ಹೋರಾಟಗಾರರು ಸೇರಿದಂತೆ ಐದು ನೂರಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಲಿದ್ದಾರೆ.

ನಾಲ್ಕನೇ ದಿನ ಹಳ್ಳಿಗಾಡಿನ ಜನಸಾಮಾನ್ಯರು, ರೈತರು, ಮಹಿಳೆಯರು, ಮಕ್ಕಳು, ವಯೋವೃದ್ಧರು, ವಿಕಲಚೇತನರನ್ನು ದೃಷ್ಟಿಯಲ್ಲಿಟ್ಟುಕೊಂಡು ಉಚಿತ ಆರೋಗ್ಯ ತಪಾಸಣಾ ಬೃಹತ್ ಸಮಾವೇಶವನ್ನು ಏರ್ಪಡಿಸಿದ್ದು, ಬೆಂಗಳೂರಿನ ಪ್ರತಿಷ್ಠಿತ ಎಂ.ಎಸ್. ರಾಮಯ್ಯ ಆಸ್ಪತ್ರೆಯ ವೈದ್ಯರ ತಂಡ ವಿವಿಧ ಕಾಯಿಲೆಗಳ ತಪಾಸಣೆ ನಡೆಸಿ, ತಮ್ಮ ಕೈಲಾದ ಮಟ್ಟಿಗೆ ಔಷಧೋಪಚಾರವನ್ನು ಮಾಡಲಿದ್ದಾರೆ. ಇವರೊಂದಿಗೆ ಜಿಲ್ಲಾ ಕುಟುಂಬ ಕಲ್ಯಾಣ ಇಲಾಖೆ, ತಾಲ್ಲೂಕು ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯವರು ಕೈ ಜೋಡಿಸಲಿದ್ದಾರೆ.

ಕೊನೆಯ ದಿನವಾದ ದಿನಾಂಕ 29ರ ಶುಕ್ರವಾರ ಸರ್ವ ಶರಣರ ಬೃಹತ್ ಸಮಾವೇಶ ನಡೆಯಲಿದ್ದು, ಈ ಸಮಾವೇಶದ ಸಾನ್ನಿಧ್ಯವನ್ನು ಉತ್ತರ ಕರ್ನಾಟಕದ ಹೆಸರಾಂತ ಬಸವ ದಾಸೋಹಿ ಮಠವಾದ ಇಲಕಲ್ ಚಿತ್ತರಗಿ ಮಹಾ ಸಂಸ್ಥಾನದ ಶ್ರೀ ಗುರು ಮಹಾಂತ ಸ್ವಾಮೀಜಿ ವಹಿಸುವರು.

ಜಾತಿ-ಧರ್ಮದ ಹೆಸರಿನಲ್ಲಿ, ಊಟೋಪಚಾರದ ವಿಚಾರದಲ್ಲಿ, ಉಡುಗೆ-ತೊಡುಗೆಯ ವಿನ್ಯಾಸದಲ್ಲಿ ಸಂಘರ್ಷಕ್ಕೆ ಇಳಿದಿರುವ ಕೆಲ ಶಕ್ತಿಗಳು ದೇಶದ ಬಹುತ್ವ ಪರಂಪರೆಗೆ ದೊಡ್ಡ ಕೊಡಲಿ ಏಟು ಕೊಡಲು ಮುಂದಾಗಿದ್ದಾರೆ.

ಇಂತಹ ವಿಷಮ ಕಾಲಘಟ್ಟದಲ್ಲಿ ನಾವು ಮತ್ತೆ ಮತ್ತೆ ಬಹುತ್ವದ ವಿಶಾಲ ಚಿಂತನೆಗೆ ಒತ್ತು ಕೊಡಬೇಕಾಗಿದೆ. ಹೀಗಾಗಿ ಅಂದಿನ ಸಮಾವೇಶ ಸರ್ವಧರ್ಮದ ಚಿಂತಕರ ಅನುಭವ ಮಂಟಪದಂತೆ ನಡೆಯಲಿದೆ.

ಐದು ದಿನದ ದಾಸೋಹ ಸಂಸ್ಕೃತಿ ಉತ್ಸವದಲ್ಲಿ ಅನ್ನ ದಾಸೋಹ, ಜ್ಞಾನ ದಾಸೋಹ, ಅರಿವು-ಆರೋಗ್ಯ ದಾಸೋಹದ ಜೊತೆಗೆ ವಿವಿಧ ಶರಣರ ಕಲಾ ತಂಡಗಳಿಂದ ವಚನ ಗಾಯನ ದಾಸೋಹ ಕೂಡ ನಡೆಯಲಿದೆ. ಕಾರ್ಯಕ್ರಮದ ಐದು ದಿನ ಪಕ್ಕದ ಕಾನಾಮಡಗು ದಾಸೋಹ ಮಠದ ಧರ್ಮಾಧಿಕಾರಿಗಳ ಗೌರವ ಉಪಸ್ಥಿತಿ ಇರಲಿದೆ.

## ಬಂಧನ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಕೇಜ್ರಿವಾಲ್ ಅರ್ಜಿ

ನವದೆಹಲಿ, ಮಾ. 23 – ಅಬಕಾರಿ ನೀತಿ ಹಗರಣದಲ್ಲಿ ಜಾರಿ ನಿರ್ದೇಶನಾಲಯ ತಮ್ಮನ್ನು ಬಂಧಿಸಿರುವುದನ್ನು ಪ್ರಶ್ನಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ.

ಜಾರಿ ನಿರ್ದೇಶನಾಲಯ ತಮ್ಮನ್ನು ಬಂಧಿಸಿರುವುದು ಅಕ್ರಮವಾಗಿದೆ. ತಮ್ಮನ್ನು ತಕ್ಷಣವೇ ಕಸ್ಟಡಿಯಿಂದ ಬಿಡುಗಡೆ ಮಾಡಬೇಕು ಎಂದು ಕೇಜ್ರಿವಾಲ್ ಮನವಿ ಮಾಡಿಕೊಂಡಿದ್ದಾರೆ. ವಿಶೇಷ ನ್ಯಾಯಾಲಯವು ಕೇಜ್ರಿವಾಲ್‌ರನ್ನು ಆರು ದಿನಗಳ ಕಸ್ಟಡಿಗೆ ವಹಿಸಿದೆ. ಈ ನಡುವೆ ಕೇಜ್ರಿವಾಲ್ ಅವರ ಪತ್ನಿ ಸುನಿತಾ ಅವರು, ತಮ್ಮ ಪತಿ ಜೈಲಿನಿಂದ ನೀಡಿರುವ ಸಂದೇಶವನ್ನು ಓದಿದ್ದಾರೆ. ಈ ನಡುವೆ, ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ದೆಹಲಿ ಸಚಿವೆ ಆತಿಶಿ, ಜಾರಿ ನಿರ್ದೇಶನಾಲಯವು ಹಲವು ಬಾರಿ ದಾಳಿ ನಡೆಸಿದರೂ ಅಕ್ರಮ ಹಣದ ಸುಳಿವು ಪತ್ತೆಯಾಗಿಲ್ಲ ಎಂದು ಹೇಳಿದ್ದಾರೆ.

## ಈರುಳ್ಳಿ ರಫ್ತು ನಿಷೇಧ ಮುಂದುವರಿಕೆ

ನವದೆಹಲಿ, ಮಾ. 23 – ಕೇಂದ್ರ ಸರ್ಕಾರ ಈರುಳ್ಳಿ ರಫ್ತಿನ ಮೇಲಿನ ನಿಷೇಧ ಮುಂದುವರೆಸಿದೆ. ದೇಶೀಯವಾಗಿ ಈರುಳ್ಳಿ ಲಭ್ಯತೆ ಹೆಚ್ಚಿಸಲು ಹಾಗೂ ಬೆಲೆ ನಿಯಂತ್ರಣದಲ್ಲಿಡಲು ಈ ಕ್ರಮ ತೆಗೆದುಕೊಳ್ಳಲಾಗಿದೆ. ಈ ಹಿಂದೆ ಮಾರ್ಚ್ 31ರವರೆಗೆ ಈರುಳ್ಳಿ ರಫ್ತಿನ ಮೇಲೆ ನಿಷೇಧ ಹೇರಲಾಗಿತ್ತು. ಮುಂದಿನ ಆದೇಶದವರೆಗೆ ರಫ್ತು ನಿಷೇಧ ಮುಂದುವರೆಯಲಿದೆ. ಕಳೆದ ಡಿಸೆಂಬರ್ 8, 2023ರಂದು ಈರುಳ್ಳಿ ರಫ್ತಿನ ಮೇಲೆ ನಿಷೇಧ ಹೇರಲಾಗಿತ್ತು. ನಂತರ ಅದನ್ನು ವಿಸ್ತರಿಸಲಾಗಿತ್ತು. ಆದರೂ, ಮಿತ್ರ ದೇಶಗಳಿಗೆ ಸೀಮಿತವಾಗಿ ಈರುಳ್ಳಿ ರಫ್ತು ಮಾಡಲು ಅನುಮತಿ ನೀಡಲಾಗುತ್ತಿದೆ. ಯು.ಎ.ಇ. ಹಾಗೂ ಬಾಂಗ್ಲಾದೇಶಗಳಿಗೆ 64,400 ಟನ್ ಈರುಳ್ಳಿ ರಫ್ತು ಮಾಡಲು ಅನುಮತಿ ನೀಡಲಾಗಿದೆ.

## ನಗರದಲ್ಲಿ ಇಂದು 'ಹುತಾತ್ಮರು' ಏಕ ವ್ಯಕ್ತಿ ನಾಟಕ ಪ್ರದರ್ಶನ

ಅನ್ವೇಷಕರು ಆರ್ಟ್ ಫೌಂಡೇಶನ್ ವತಿಯಿಂದ ಇಂದು ಸಂಜೆ 7 ಗಂಟೆಗೆ 'ಹುತಾತ್ಮರು' ಏಕ ವ್ಯಕ್ತಿ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಕಲಾವಿದ ಸಿದ್ದರಾಜು ಎಸ್.ಎಸ್. ತಿಳಿಸಿದ್ದಾರೆ. ದೃಶ್ಯ ಕಲಾ ಮಹಾವಿದ್ಯಾಲಯದ ಸಭಾಂಗಣದಲ್ಲಿ ಪ್ರದರ್ಶನ ನಡೆಯಲಿದ್ದು, ರವೀಂದ್ರ ಹೆಚ್.ಅರಳಗುಪ್ಪೆ ಅಭಿನಯಿಸಲಿದ್ದಾರೆ. ಯುದ್ಧದ ಭೀತಿ ಮೂಡಿಸುವ ಶಬ್ಧಗಳೊಂದಿಗೆ ನಾಟಕ ಆರಂಭಗೊಳ್ಳುತ್ತದೆ.

ಕಾರ್ಗಿಲ್ ಯುದ್ಧದ ಆರಂಭ, ಯುದ್ಧಕ್ಕೆ ಕಾರಣ, ಹುತಾತ್ಮ ಸೈನಿಕನ ಕುಟುಂಬದ ನೋವು, ಸಂಕಟದ ಬಗ್ಗೆ ನಾಟಕದಲ್ಲಿ ಪ್ರೇಕ್ಷಕರಿಗೆ ಮನವರಿಕೆ ಮಾಡಿಕೊಡಲಾಗುತ್ತದೆ. ಮಕ್ಕಳಲ್ಲಿ ದೇಶ ಭಕ್ತಿ ಹೆಚ್ಚಿಸಿ ಎಂದು ಪೋಷಕರಿಗೆ ಸಂದೇಶ ರವಾನಿಸುವ ನಾಟಕ ಇದಾಗಿದೆ ಎಂದರು.

## ನಾಳೆಯಿಂದ ಮೌಲ್ಯಾಂಕನ ಪರೀಕ್ಷೆ


**(1ನೇ ಪುಟದಿಂದ)** ಪರೀಕ್ಷೆ ಮಧ್ಯಾಹ್ನ 2ರಿಂದ ಸಂಜೆ 5.15ರವರೆಗೆ ಹಾಗೂ ಸಮಾಜ ವಿಜ್ಞಾನ ವಿಷಯದ ಪರೀಕ್ಷೆ ಮಾರ್ಚ್ 28ರ ಗುರುವಾರದಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1.15ರವರೆಗೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

## ನಾಳೆ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಪ್ರವಾಸ



ದಾವಣಗೆರೆ, ಮಾ.23- ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರು ನಾಡಿದ್ದು ದಿನಾಂಕ 25ರ ಸೋಮವಾರ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಲೋಕಿಕೆರೆ ಜಿಲ್ಲಾ ಪಂಚಾಯಿತಿ ವ್ಯಾಪ್ತಿ ಯಲ್ಲಿ ಪ್ರಚಾರ ನಡೆಸಲಿದ್ದಾರೆ.ನಾಡಿದ್ದು ದಿನಾಂಕ 25 ರ ಸೋಮವಾರ ಬೆಳಗ್ಗೆ 9 .30 ಕ್ಕೆ ಕುಂಟಪಾಲನಹಳ್ಳಿ, 10.ಕ್ಕೆ ಕೋಲ್ಕುಂಟೆ, 10.30 ಕ್ಕೆ ಯರವನಾಗ್ತಿಹಳ್ಳಿ, 11 ಕ್ಕೆ ಯರವ್ವನಾಗ್ತಿಹಳ್ಳಿ ಕ್ಯಾಂಪ್ ಮತ್ತು ಕಲ್ಕೆರೆ, 11.30 ಕ್ಕೆ ಲೋಕಿಕೆರೆ, 12.30 ಕ್ಕೆ ಹೂವಿನಮಡು, ಮಧ್ಯಾಹ್ನ 1 ಗಂಟೆಗೆ ಮತ್ತಿ, 1.30 ಕ್ಕೆ ಗೋಣಿ ವಾ ಡ ಕ್ಯಾಂಪ್ ಮತ್ತು ಆಂಜನೇಯ ನಗರ, 2 ಗಂಟೆಗೆ ಹೊನ್ನಮರಡಿ, 2.30 ಕ್ಕೆ ಗೋ ಣಿವಾಡ ಗ್ರಾಮಗಳಲ್ಲಿ ಪ್ರಚಾರ ಕಾರ್ಯ ನಡೆಸಲಿದ್ದಾರೆ.ಸಂಜೆ 4 ಗಂಟೆಗೆ ಶ್ಯಾಗಲೆ, 5 ಗಂಟೆಗೆ ಕಂದಗಲ್ಲು, 6ಕ್ಕೆ ಮಳಲ್ಕೆರೆ, 6.30 ಕೋಡಿಹಳ್ಳಿ ಮತ್ತು ಕ್ಯಾಂಪ್, 7 ಕ್ಕೆ ಕಾಶೀಪುರ ಮತ್ತು ಕ್ಯಾಂಪ್‌ಗಳಲ್ಲಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅವರು ಪ್ರಚಾರ ಕಾರ್ಯ ನಡೆಸುವರು.

## ನಗರದಲ್ಲಿ ನಾಳೆ ಶಿವಾನುಭವಗೋಷ್ಠಿ



ದಾವಣಗೆರೆ, ಮಾ.23- ಹೊರವಲಯದ ಬಾಡಾ ಕ್ರಾಸ್ ಬಳಿ ಇರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ನಾಡಿದ್ದು ದಿನಾಂಕ 25ರ ಸೋಮವಾರ ಬೆಳಿಗ್ಗೆ 11.30 ಗಂಟೆಗೆ 277 ನೇ ಹೋಳಿ ಹುಣ್ಣಿಮೆ ಶಿವಾನುಭವಗೋಷ್ಠಿ ಹಾಗೂ ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಶಾಸಕ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶ್ರೀ ವೀರೇಶ್ವರ ಪುಣ್ಯಾಶ್ರಮದ ಅಧ್ಯಕ್ಷ ಅಥಣಿ ವೀರಣ್ಣ, ಖಜಾಂಚಿ ದೇವರಮನಿ ಶಿವಕುಮಾರ್, ಕಾರ್ಯದರ್ಶಿ ಜೆ.ಎನ್. ಕರಿಬಸಪ್ಪ, ನಿರ್ದೇಶಕ ಜಿ.ಹೆಚ್. ಯಲ್ಲಪ್ಪ ಭಾಗವಹಿಸಲಿದ್ದಾರೆ.

## ರುಕುಮಾಯಿ ಮಹಿಳಾ ಮಂಡಳಿಯಿಂದ ಬಡ ಮಹಿಳೆಯರಿಗೆ ಉಚಿತ ಸೀರೆ ವಿತರಣೆ



ದಾವಣಗೆರೆ, ಮಾ. 23 - ನಗರದ ಭಾವಸಾರ ಕ್ಷತ್ರಿಯ ಸಮಾಜದ ರುಕುಮಾಯಿ ಮಹಿಳಾ ಮಂಡಳಿ ವತಿಯಿಂದ ಮಹಾರಾಜ ಪೇಟೆಯ ಶ್ರೀ ವಿಠಲ ಮಂದಿರದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ನಿನ್ನೆ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಮಾಜದ ಬಡ ಮಹಿಳೆಯರಿಗೆ ಉಚಿತವಾಗಿ ಸೀರೆಗಳನ್ನು ವಿತರಿಸಲಾಯಿತು. ಮಂಡಳಿಯ ಅಧ್ಯಕ್ಷರಾದ ಶ್ರೀಮತಿ ಜ್ಯೋತಿ ಅಂಬರಕರ್, ಕಾರ್ಯದರ್ಶಿ ಶ್ರೀಮತಿ ಅನಿತಾ ಅಂಬರಕರ್, ಕೋಶಾಧ್ಯಕ್ಷರಾದ ಶ್ರೀಮತಿ ಆಶಾಲತಾ ಅಂಬರಕರ್ ಭಾಗವಹಿಸಿದ್ದರು. ದೈವ ಮಂಡಳಿಯ ಉಪಾಧ್ಯಕ್ಷ ಅಶೋಕ ಅಂಬರಕರ್, ಕಾರ್ಯದರ್ಶಿ ಈಶ್ವರ್ ಗುಜ್ಜರ್ ಸಭೆ ನಡೆಸಲು ಸಹಕರಿಸಿದರು.

## ರಾಣೇಬೆನ್ನೂರಿನಲ್ಲಿ ಇಂದು ಮಹಿಳಾ ದಿನಾಚರಣೆ

ದೇವಾಂಗ ಸಮಾಜದಿಂದ ಕಾಕಿವ ಜನಸೇವಾ ಸಂಘದ ಸಭಾ ಭವನದಲ್ಲಿ ಇಂದು ಬೆಳಗ್ಗೆ 10.30ಕ್ಕೆ ಮಹಿಳಾ ದಿನಾಚರಣೆ ಮತ್ತು ಬಹುಮಾನ ವಿತರಣೆ ಕಾರ್ಯಕ್ರಮ ನಡೆಯಲಿದೆ. ಹುಬ್ಬಳ್ಳಿ ಮಹಾನಗರ ಪಾಲಿಕೆ ಮೇಯರ್ ವೀಣಾ ಬರದ್ವಾಡ ಕಾರ್ಯಕ್ರಮ ಉದ್ಘಾಟಿಸಲಿದ್ದು, ದೇವಾಂಗ ಮಹಿಳಾ ಸಮಾಜದ ಅಧ್ಯಕ್ಷೆ ಸುಮಾ ಹಳ್ಳಿ ಅಧ್ಯಕ್ಷತೆ ವಹಿಸುವರು. ಶಾರದಾ ಆನ್ವೇರಿ, ರೂಪಾ ಚಿನ್ನಿಕಟ್ಟಿ, ರೂಪಾ ಕಾಕಿ, ಡಾ. ವಿದ್ಯಾ ಕೇಲಗಾರ, ಜಯಶ್ರೀ ಕುಂಚೂರು, ಸೌಮ್ಯಾ ಹರಿಹರ, ಕವಿತಾ ಹೆದ್ದೇರಿ, ಪುಷ್ಪಾ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸುವರು.

## ಜಿಗಳಿಯಲ್ಲಿ ಇಂದು ಅನ್ನಸಂತರ್ಪಣೆ

ಮಲೇಬೆನ್ನೂರು ಸಮೀಪದ ಜಿಗಳಿ ಗ್ರಾಮದ ಆರಾಧ್ಯ ದೈವ ಶ್ರೀ ರಂಗನಾಥ ಸ್ವಾಮಿ ರಥೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 10.30 ರಿಂದ ದೇವಸ್ಥಾನದಲ್ಲಿ ಜವಳ, ಮುದ್ರೆ ಹಾಗೂ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಸಂಜೆ ಓಕುಳಿ ನಂತರ ಕಂಕಣ ವಿಸರ್ಜನೆ ನಡೆಯಲಿದೆ. ನಾಳೆ ಸೋಮವಾರ ಬೆಳಿಗ್ಗೆ ವಿವಿಧ ಕಾರ್ಯಕ್ರಮಗಳ ನಂತರ ಸಂಜೆ 7.30 ರಿಂದ ರಾಜಬೀದಿಗಳಲ್ಲಿ ದೇವರುಗಳ ಉತ್ಸವ ಜರುಗಲಿದೆ.

## ನಾಳೆ ಸಾಮೂಹಿಕ ಗಾಯತ್ರಿ ಪೂಜೆ, ಉಪಾಸನೆ

ದಾವಣಗೆರೆ, ಮಾ.23- ಗಾಯತ್ರಿ ದೇವಿಯ ಉಪಾಸಕರ ಕ್ರಿಯಾತ್ಮಕ ಅಧ್ಯಾತ್ಮ ಸಂಸ್ಥೆ ಗಾಯತ್ರಿ ಪರಿವಾರದಿಂದ ಹೋಳಿ ಹುಣ್ಣಿಮೆ ಅಂಗವಾಗಿ ನಗರದ ಜಯದೇವ ವೃತ್ತದಲ್ಲಿನ ಶಂಕರ ಮಠದಲ್ಲಿ ನಾಡಿದ್ದು ದಿನಾಂಕ 25ರ ಸೋಮವಾರ ಬೆಳಗ್ಗೆ 7ಕ್ಕೆ ಸಾಮೂಹಿಕ ಗಾಯತ್ರಿ ಪೂಜೆ ಹಾಗೂ ಉಪಾಸನೆ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಧಾನ ಕಾರ್ಯದರ್ಶಿ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

## ತಾ.ಪಂ. ಕಛೇರಿಯಲ್ಲಿ ಕುಡಿಯುವ ನೀರಿನ ಸಹಾಯವಾಣಿ ಪ್ರಾರಂಭ : ಇಓ ಸುಮಾ

**ಹೊನ್ನಾಳಿ**

ಹೊನ್ನಾಳಿ, ಮಾ. 23 - ತಾಲ್ಲೂಕು ಪಂಚಾಯ್ತಿ ಕಾರ್ಯಾಲಯದಲ್ಲಿ ಕುಡಿಯುವ ನೀರಿನ ಸಹಾಯ ವಾಣಿಯನ್ನು ತೆರೆಯಲಾಗಿದ್ದು, ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕೆಂದು ಇಓ ಡಿ.ಎಸ್. ಸುಮಾ ತಿಳಿಸಿದ್ದಾರೆ.

ತಾಲ್ಲೂಕಿನಲ್ಲಿ ಬರಗಾಲವಿರುವ ಪ್ರಯುಕ್ತ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆಯುಂಟಾಗದಂತೆ ತಾ.ಪಂ. ಕಛೇರಿಯಲ್ಲಿ 24X7 ಸಹಾಯವಾಣಿ ಕೇಂದ್ರವನ್ನು ತೆರೆಯಲಾಗಿದ್ದು, ಸಹಾಯವಾಣಿ ಸಂಖ್ಯೆ-7624972722 ಗೆ ಕರೆ ಮಾಡಿ ಕುಡಿಯುವ ನೀರಿನ ಸಮಸ್ಯೆಯಿದ್ದಲ್ಲಿ ಪರಿಹಾರ ಕಂಡುಕೊಳ್ಳಬೇಕಾಗಿ ಅವರು ಮನವಿ ಮಾಡಿದ್ದಾರೆ.

## ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಿಂದ ನಾಡಿದ್ದು ಉಚಿತ ಮಜ್ಜಿಗೆ, ನೀರು ವಿತರಣೆ

ದಾವಣಗೆರೆ, ಮಾ. 23- ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಇದೇ ದಿನಾಂಕ 26 ರಿಂದ ಏಪ್ರಿಲ್ 26 ರವರೆಗೆ ಒಂದು ತಿಂಗಳ ಕಾಲ ಉಚಿತ ಮಜ್ಜಿಗೆ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ನಗರದ ಜಯದೇವ ವೃತ್ತ, ಚಿಗಟೇರಿ ಜಿಲ್ಲಾ ಆಸ್ಪತ್ರೆಬಳಿ, ಕೆ.ಆರ್. ಮಾರ್ಕೆಟ್ (ಶಿವ ಕೋ-ಆಪ್ ಬ್ಯಾಂಕ್ ಮುಂಭಾಗ), ರಾಮ್ ಅಂಡ್ ಕೋ ಸರ್ಕಲ್ ಒಟ್ಟು ನಾಲ್ಕು ಭಾಗಗಳಲ್ಲಿ ಮಜ್ಜಿಗೆ ಹಾಗೂ ನೀರು ವಿತರಣೆಗೆ ವ್ಯವಸ್ಥೆ ಮಾಡಲಾಗಿದೆ ಎಂದು ಟ್ರಸ್ಟ್ ಪದಾಧಿಕಾರಿಗಳಾದ ಡಾ. ಬಿ.ಎಂ. ವಿಶ್ವನಾಥ್, ಡಾ. ಹೆಚ್.ಎನ್.ಮಲ್ಲಿಕಾರ್ಜುನ್, ಶಿವನಕೆರೆ ಬಸವಲಿಂಗಪ್ಪ ತಿಳಿಸಿದ್ದಾರೆ.

ನಾಲ್ಕು ಕಡೆಗಳಲ್ಲಿ ಒಂದು ದಿನದ ಮಜ್ಜಿಗೆ ಮತ್ತು ನೀರಿನ ವೆಚ್ಚ 6 ಸಾವಿರ ರೂ. ಗಳಾಗಲಿದ್ದು, ಒಂದು ಕಡೆಗೆ ಮಜ್ಜಿಗೆ ಮತ್ತು ನೀರಿಗೆ 1500 ರೂ.ಗಳು ವೆಚ್ಚ ತಗುಲಿದೆ. ದಾನಿಗಳು ನಾಲ್ಕು ಸ್ಥಳಗಳ ಖರ್ಚನ್ನು ಸಹ ಭರಿಸಬಹುದು. ಆಸಕ್ತ ದಾನಿಗಳು ಮಾಹಿತಿಗಾಗಿ ಶ್ರೀಮತಿ ಮಂಜುಳಾ ಬಸವಲಿಂಗಪ್ಪ (7483809312) ಇವರನ್ನು ಸಂಪರ್ಕಿಸಲು ಕೋರಲಾಗಿದೆ.

## ಕುಂಬಳೂರಿನಲ್ಲಿ ಇಂದು ಉತ್ಸವ



ಮಲೇಬೆನ್ನೂರು ಸಮೀಪದ ಕುಂಬಳೂರು ಗ್ರಾಮದ ಶ್ರೀ ಹನುಮಂತ ದೇವರ ರಥೋತ್ಸವವು ಇದೇ ದಿನಾಂಕ 27ರ ಬುಧವಾರ ಜರುಗಲಿದೆ.

ಇಂದು ರಾತ್ರಿ 9.30 ಕ್ಕೆ ಚಿಗರಿ ಉತ್ಸವ, ನಾಳೆ ಸೋಮವಾರ ರಾತ್ರಿ 9.30ಕ್ಕೆ ಕುದುರೆ ಉತ್ಸವದ ನಂತರ ರಾತ್ರಿ 12ಕ್ಕೆ ಮಹಾರಥಕ್ಕೆ ಕಳಸ ಸ್ಥಾಪನೆ ಮಾಡಲಾಗುವುದು.

## 108 ಆಂಬ್ಯುಲೆನ್ಸ್ ಸಿಬ್ಬಂದಿಗಳ ಬೇಡಿಕೆ ಈಡೇರಿಸದಿದ್ದರೆ ಸೇವೆ ಸ್ಥಗಿತಗೊಳಿಸಿ ಹೋರಾಟ

ದಾವಣಗೆರೆ, ಮಾ.23- ಆರೋಗ್ಯ ಕವಚ 108 ಆಂಬ್ಯುಲೆನ್ಸ್ ಸಿಬ್ಬಂದಿಗಳ ಬಾಕಿ ವೇತನ ನೀಡುವುದೂ ಸೇರಿದಂತೆ, ಕೆಲವು ಬೇಡಿಕೆಗಳನ್ನು ಮುಂದಿನ ಹತ್ತು ದಿನಗಳೊಳಗಾಗಿ ಈಡೇರಿಸದೇ ಇದ್ದಲ್ಲಿ ಎಲ್ಲಾ ಸಿಬ್ಬಂದಿಗಳು ಸಾಮೂಹಿಕ ರಜೆ ಪಡೆಯುವ ಮೂಲಕ ಸೇವೆ ಸ್ಥಗಿತಗೊಳಿಸುವುದಾಗಿ ಸುವರ್ಣ ಕರ್ನಾಟಕ ಆರೋಗ್ಯ ಕವಚ (108) ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಎಸ್.ಮಂಜುನಾಥ್ ಹೇಳಿದ್ದಾರೆ.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಡಿಸೆಂಬರ್ 2023 ರಿಂದ ಇಲ್ಲಿಯವರೆಗೂ ಸಿಬ್ಬಂದಿಗಳಿಗೆ ವೇತನ ನೀಡಿಲ್ಲ. ಇದರಿಂದಾಗಿ ಕುಟುಂಬ ನಿರ್ವಹಣೆ ಕಷ್ಟವಾಗಿದೆ. ಹಲವಾರು ಬಾರಿ ಅಧಿಕಾರಿಗಳ ಮುಂದೆ ನಮ್ಮ ಅಳಲು ತೋಡಿಕೊಂಡರು ಪ್ರಯೋಜನವಾಗಿಲ್ಲ ಎಂದು ಹೇಳಿದರು.

ಜಿಲ್ಲೆಯಾದ್ಯಂತ 19 ಆಂಬ್ಯುಲೆನ್ಸ್ ಗಳಿದ್ದು, ಇ.ಎಂ.ಟಿ (ಸ್ಟ್ಯಾಫ್ ನರ್ಸ್) ಪೈಲಟ್ (ಚಾಲಕರು) ಸೇರಿ 107 ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರಿಗೆ ಡಿಸೆಂಬಲ್-2023 ರಿಂದ ಮಾರ್ಚ್-2024ರ ವರೆಗೆ ವೇತನ ಪಾವತಿಯಾಗಿಲ್ಲ ಎಂದರು.

ಆಗಸ್ಟ್ 2022ರ ವರೆಗೆ ಇ.ಎಂ.ಟಿಗೆ ರೂ.15509 ಮತ್ತು ಪೈಲಟ್‌ಗೆ ರೂ 15731 ರೂಪಾಯಿಗಳನ್ನು ವೇತನ ರೂಪದಲ್ಲಿ ನೀಡಲಾಗುತ್ತಿತ್ತು. 2022ರ ಸೆಪ್ಟೆಂಬರ್ ತಿಂಗಳಿನಲ್ಲಿ ಬಾಕಿ ಇದ್ದ 3 ವರ್ಷಗಳ ಹೆಚ್ಚುವರಿ ವೇತನ (ಶೇ.45 ಇನ್‌ಕ್ರಿಮೆಂಟ್) ಸೇರಿ ಇ.ಎಂ.ಟಿಗೆ 36,608 ರೂ ಮತ್ತು ಪೈಲಟ್ 35,603 ರೂ. ವೇತನ ದೊರೆಯುತ್ತಿತ್ತು. ಈ ಹೆಚ್ಚುವರಿ ಹೊಸ ವೇತನವನ್ನು ಕೇವಲ 6 ತಿಂಗಳುಗಳ ಕಾಲ ಮಾತ್ರ ನೀಡಿ ನಂತರ ಏಕಾಏಕಿ ಕಡಿತಗೊಳಿಸಲಾಗಿದೆ.

ಸೆಪ್ಟೆಂಬರ್ - 2022 ರಿಂದ ಫೆಬ್ರವರಿ - 2023 ರ ವರೆಗೆ ಯಾವುದೇ ಕಾರಣವನ್ನು ನೀಡದೇ ಇ.ಎಂ.ಟಿಗೆ 4 ಸಾವಿರ ರೂ. ಹಾಗೂ ಪೈಲಟ್‌ಗೆ 6 ಸಾವಿರ ರೂ. ಕಡಿತಗೊಳಿಸಲಾಗಿದೆ. ಅಲ್ಲದೇ ಮತ್ತೆ ಕಡಿತಗೊಳಿಸುವ ಮಾತುಗಳೂ ಕೇಳಿ ಬಂದಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಸರ್ಕಾರ ಹಾಗೂ ಅಧಿಕಾರಿಗಳು ಶೀಘ್ರ ಸಭೆ ನಡೆಸಿ ವೇತನದಲ್ಲಿ ಉಂಟಾಗಿರುವ ಗೊಂದಲಗಳನ್ನು ನಿವಾರಿಸಬೇಕು. ಇಲ್ಲದಿದ್ದರೆ ಸೇವೆ ಸ್ಥಗಿತಗೊಳಿಸಿ, ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ರಮೇಶ್ ನಾಯ್ಕ, ತಿಪ್ಪಣ್ಣ, ರಾಜನಾಯ್ಕ, ನಟರಾಜ್ ಇತರರು ಇದ್ದರು.

## ಬಿಜೆಪಿ ಮತ್ತದರ ಅಂಗ ಸಂಸ್ಥೆಗಳಿಂದ ಗಲಭೆ ಆರೋಪ : ಕ್ರಮಕ್ಕೆ ಕಾಂಗ್ರೆಸ್‌ನಿಂದ ಮನವಿ



ದಾವಣಗೆರೆ, ಮಾ. 23- ನಗರದಲ್ಲಿ ಕೆಲವು ಬಿಜೆಪಿ ಪಕ್ಷದಲ್ಲಿ ಗುರುತಿಸಿಕೊಂಡಿರುವ ಯುವಕರು ಹಾಗೂ ಮತ್ತು ಅದರ ಅಂಗಸಂಸ್ಥೆಗಳ ಪದಾಧಿಕಾರಿಗಳು ಗಲಭೆ ಸೃಷ್ಟಿಸುವ ಪ್ರಯತ್ನ ಮಾಡುತ್ತಿದ್ದು, ಇದಕ್ಕೆ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ ಕಾಂಗ್ರೆಸ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಿತು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿಯವರ ನೇತೃತ್ವದಲ್ಲಿ ಗಲಭೆ ಸೃಷ್ಟಿಸುವ ಉದ್ದೇಶದಿಂದ ರಾತ್ರಿ ವೇಳೆ ಸುಖಾಸುಮ್ಮನೆ ಪ್ರಮುಖ ವೃತ್ತ ಮತ್ತು ರಸ್ತೆಗಳಲ್ಲಿ ಅಸಭ್ಯವಾಗಿ ಮಾತನಾಡುತ್ತಾ ಕೆಲವರನ್ನು ನಿಂದಿಸುತ್ತಾ ಓಡಾಡುತ್ತಿದ್ದು, ಈ ಬಗ್ಗೆ ಸ್ಥಳದಲ್ಲಿರುವ ಪೊಲೀಸರು ಎಚ್ಚರಿಕೆ ನೀಡಿದರೂ ಸಹ ಗೊಂದಲ ಸೃಷ್ಟಿಸುತ್ತಿದ್ದು, ಈ ಬಗ್ಗೆ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಅಯ್ಯೂಬ್ ಪೈಲ್ವಾನ್, ಮಹಾನಗರ ಪಾಲಿಕೆ ಸದಸ್ಯರಾದ ಎ.ನಾಗರಾಜ್, ಚಮನ್ ಸಾಬ್, ಮೈನುದ್ದೀನ್, ಡೋಲಿ ಚಂದ್ರು, ಮೊಟ್ಟೆ ದಾದಾಪೀರ್, ಹರೀಶ್, ಆಮ್ ಆದ್ಮಿ ಪಕ್ಷದ ಶಿವಕುಮಾರ್ ಸೇರಿದಂತೆ, ಹಲವರಿದ್ದರು.


**IMPERIAL PUBLIC SCHOOL**
NEAR DC OFFICE, DAVANAGERE.

**URGENT REQUIREMENTS**
Invites Application for Teaching Staff for following details

| Sl. No. | Subject | Qualification & Experience | No. of Vacancies |
|---|---|---|---|
| 1 | Kannada | M.A./B.A., B.Ed 2-3 Years Experience | 2 |
| 2 | English | B.A./M.A., B.Ed 2-3 Years Experience | 2 |
| 3 | Hindi | B.A./M.A., B.Ed 2-3 Years Experience | 2 |
| 4 | Mathematics | M.Sc./B.Sc., B.Ed 2-3 Years Experience | 2 |
| 5 | Science | M.Sc./B.Sc., B.Ed 2-3 Years Experience | 2 |
| 6 | Social Science | M.A./B.A., B.Ed 2-3 Years Experience | 2 |
| 7 | Physical Education | BP.ed | 2 |

**WALK IN INTERVIEW**
Send your resume to email ID: imperialdvg@gmail.com
PHONE CONTACT : 7259296895, 7483103312

# ಗುಜರಾತ್‌ನ ಇಬ್ಬರು ಬಿಜೆಪಿ ಅಭ್ಯರ್ಥಿಗಳು ಕಣದಿಂದ ಹಿಂದಕ್ಕೆ

**ಮೋದಿ ಗೆದ್ದಿದ್ದ ವಡೋದರ ಕ್ಷೇತ್ರದ ಅಭ್ಯರ್ಥಿ ವಿರುದ್ಧ ತೀವ್ರವಾಗಿದ್ದ ಆಕ್ರೋಶ**

ಅಹಮದಾಬಾದ್, ಮಾ. 23 – ಗುಜರಾತ್‌ನ ವಡೋದರ ಹಾಗೂ ಸಬರ್ಕಾಂತ ಲೋಕಸಭಾ ಕ್ಷೇತ್ರಗಳ ಬಿಜೆಪಿ ಅಭ್ಯರ್ಥಿಗಳು 'ವೈಯಕ್ತಿಕ' ಕಾರಣ ನೀಡಿ ಸ್ಪರ್ಧೆಯಿಂದ ಹಿಂದೆ ಸರಿದಿದ್ದಾರೆ.

ಹಾಲಿ ಸಂಸದೆ ರಂಜನ ಭಟ್ ಅವರು ವಡೋದರದಿಂದ ಕಣಕ್ಕಿಳಿದಿದ್ದರು. ಸ್ಪರ್ಧೆಯಲ್ಲಿ ನನಗೆ ಆಸಕ್ತಿ ಇಲ್ಲ ಎಂದು ಭಟ್ ಹೇಳಿದ್ದಾರೆ.

ಅವರನ್ನು ಅಭ್ಯರ್ಥಿಯಾಗಿ ಘೋಷಿಸಿದ್ದಕ್ಕೆ ಬಿಜೆಪಿಯ ಒಂದು ವರ್ಗದಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. ಭಟ್ ಘೋಷಣೆ ಬೆನ್ನಲ್ಲೇ ಸಬರ್ಕಾಂತ ಕ್ಷೇತ್ರದ ಭಿಕಾಜಿ ಠಾಕೂರ್ ಅವರೂ ಸ್ಪರ್ಧೆಯಿಂದ ಹಿಂದೆ ಸರಿದಿದ್ದಾರೆ.

ಮೇ 7ರಂದು ಬಿಹಾರದ ಎಲ್ಲಾ 26 ಕ್ಷೇತ್ರಗಳಿಗೆ ಮತದಾನ ನಡೆಯಲಿದೆ. 2014 ಹಾಗೂ 2019ರಲ್ಲಿ ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸಿತ್ತು. ಭಟ್ ಕಣಕ್ಕಿಳಿಸಿರುವುದನ್ನು ವಿರೋಧಿಸಿ ವಡೋದರದಲ್ಲಿ ಆಕ್ಷೇಪ ವ್ಯಕ್ತವಾಗಿತ್ತು. ಕೆಲ ಸ್ಥಳೀಯ ಬಿಜೆಪಿ ನಾಯಕರು ಬಹಿರಂಗವಾಗಿಯೇ ಅಸಮಾಧಾನ ಹೊರ ಹಾಕಿದ್ದರು.

2014ರಲ್ಲಿ ಪ್ರಧಾನಿ ಮೋದಿ ಅವರು ವಡೋದರ ಕ್ಷೇತ್ರವನ್ನು ತೆರವುಗೊಳಿಸಿದ್ದರು. ನಂತರ ನಡೆದ ಉಪ ಚುನಾವಣೆಯಲ್ಲಿ ಭಟ್ ಗೆಲುವು ಸಾಧಿಸಿದ್ದರು. 2019ರಲ್ಲಿ ಪುನರಾಯ್ಕೆಯಾಗಿದ್ದರು.

ಮೂರನೇ ಬಾರಿಗೆ ಭಟ್ ಅವರಿಗೆ ಟಿಕೆಟ್ ನೀಡಿದ್ದನ್ನು ವಿರೋಧಿಸಿ ಬಿಜೆಪಿ ರಾಷ್ಟ್ರೀಯ ಮಹಿಳಾ ವಿಭಾಗದ ಉಪಾಧ್ಯಕ್ಷೆ ಜ್ಯೋತಿಬೆನ್ ಪಾಂಡ್ಯ ಅವರು ಪಕ್ಷಕ್ಕೆ ಹಾಗೂ ಎಲ್ಲಾ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದರು. ವಡೋದರ ನಗರದಲ್ಲಿ 'ಮೋದಿ ತುಜ್ಸೇ ಬೈರ್ ನಹಿ, ರಂಜನ ತೇರಿ ಖೈರ್ ನಹಿ' (ಮೋದಿ ಬಗ್ಗೆ ವಿರೋಧವಿಲ್ಲ, ರಂಜನ ಪರಿಸ್ಥಿತಿ ಸರಿ ಇರುವುದಿಲ್ಲ) ಎಂದು ಭಿತ್ತಿಪತ್ರಗಳನ್ನು ಅಂಟಿಸಲಾಗಿತ್ತು.

ವೈಯಕ್ತಿಕ ಕಾರಣಗಳಿಂದಾಗಿ ಸ್ಪರ್ಧಿಸಲು ನನಗೆ ಆಸಕ್ತಿ ಇಲ್ಲ ಎಂದು ಠಾಕೂರ್ ಹೇಳಿದ್ದಾರೆ.

## ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಹುಣ್ಣಿಮೆ

ದಾವಣಗೆರೆ, ಮಾ. 23- ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 25ರ ಸೋಮವಾರ ಹೋಳಿ ಹುಣ್ಣಿಮೆ (ಗುರು ಪೂರ್ಣಿಮೆ) ಪ್ರಯುಕ್ತ ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ. ಶ್ರೀ ವಿನಾಯಕ ಸೇವಾ ಸಮಿತಿಯವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.



# ವೈದ್ಯರಾದ ಮೇಲೂ ನಿರಂತರ ಕಲಿಕೆ ಬಹಳ ಮುಖ್ಯ

## ಜಜಮು ವೈದ್ಯಕೀಯ ಮಹಾವಿದ್ಯಾಲಯದ ಕಾರ್ಯಕ್ರಮದಲ್ಲಿ ನಿಮ್ಹಾನ್ಸ್‌ನ ಡಾ. ಯಶಾ

ದಾವಣಗೆರೆ, ಮಾ.23- ಮಕ್ಕಳ ಸಾಧನೆ ಕಂಡು ಹೆಮ್ಮೆ ಪಡುತ್ತಿದ್ದ ಪೋಷಕರ ಜತೆ ಗೌನು ಧರಿಸಿದ ವೈದ್ಯ ವಿದ್ಯಾರ್ಥಿಗಳು ಫೋಟೋ ಮತ್ತು ಸೆಲ್ಫಿಗಾಗಿ ಕಾಲೇಜಿನ ಆವರಣದಲ್ಲಿ ಮಿಂಚುತ್ತಿದ್ದರು.

ವೈದ್ಯಕೀಯ ಪದವಿ ಪ್ರಮಾಣ ಪತ್ರ ಪಡೆಯುವ ಧಾವಂತದ ಮಧ್ಯೆ, ಬ್ಯಾಂಡ್‌ಸೆಟ್‌ನ ಮಜಲುಗಳಿಗೆ ಹೆಜ್ಜೆ ಹಾಕುತ್ತಾ ಮೆರವಣಿಗೆ ಮೂಲಕ ಸಭಾಂಗಣ ಸೇರಿದರು.

ವೈದ್ಯಕೀಯ ವಿದ್ಯಾರ್ಥಿಗಳು ವೃತ್ತಿ ಜೀವನದಲ್ಲಿ ಜಾತಿ ಭೇದ ಮಾಡದೆ ಎಲ್ಲರನ್ನೂ ಸಮಾನ ದೃಷ್ಟಿಯಿಂದ ಕಾಣಬೇಕು ಎಂದು ನಿಮ್ಹಾನ್ಸ್‌ನ ನ್ಯೂರೋ ಪೆಥಾಲಜಿ ಮತ್ತು ನ್ಯೂರೋ ಸೈನ್ಸ್‌ನ ಮುಖ್ಯಸ್ಥೆ ಡಾ.ಟಿ.ಸಿ. ಯಶಾ ಸಲಹೆ ನೀಡಿದರು.

ನಗರದ ಜಜಮು ವೈದ್ಯಕೀಯ ಕಾಲೇಜಿನ ಬಾಪೂಜಿ ಸಭಾಂಗಣದಲ್ಲಿ ಶನಿವಾರ ನಡೆದ ಪದವಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

**ಸಾಕಷ್ಟು ಕಷ್ಟಗಳ ಮಧ್ಯೆ ವೈದ್ಯಕೀಯ ಓದಿದ ಮಕ್ಕಳು;** ವೈದ್ಯರಾದ ನಂತರ ತಮ್ಮ ಮಾನಸಿಕ ಮತ್ತು ದೈಹಿಕ ಆರೋಗ್ಯದ ಕಡೆಗೆ ಹೆಚ್ಚು ಗಮನ ಕೊಡುವ ಜತೆಗೆ ಕುಟುಂಬದ ಆರೋಗ್ಯಕ್ಕೂ ರಕ್ಷಾ ಕವಚವಾಗಬೇಕೆಂದು ಹೇಳಿದರು.

ವೈದ್ಯರಾದ ನಂತರವೂ ಸಹ ಹೆಚ್ಚು ಕಲಿಕೆಯಲ್ಲಿ ತೊಡಗಿಕೊಂಡು ವಿಶೇಷ ವೈದ್ಯರಾಗಿ ಸಮಾಜ ಸೇವೆ ಮಾಡಬೇಕು ಎಂದು ಕಿವಿಮಾತು ಹೇಳಿದರು.

> **ಕಡಿಮೆ ಔಷಧಿಗಳ ಬಳಕೆಯಿಂದ ರೋಗ ಶಮನ ಮಾಡುವ ಕಲೆ ಹೊಂದಬೇಕು. ಮುಖ್ಯವಾಗಿ ಬಡವ, ಶ್ರೀಮಂತ ಎನ್ನದೇ ರೋಗಿಯನ್ನು ಕುಟುಂಬದ ಸದಸ್ಯರಂತೆ ಕಾಳಜಿವಹಿಸಬೇಕು.**
>
> **- ಕಿರುವಾಡಿ ಗಿರಿಜಮ್ಮ**

ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ಸದಸ್ಯರಾದ ಕಿರುವಾಡಿ ಗಿರಿಜಮ್ಮ ಮಾತನಾಡಿ, ಸಮಾಜದಲ್ಲಿ ವೈದ್ಯರಿಗೆ ಪೂಜ್ಯನೀಯ ಸ್ಥಾನವಿದೆ. ಆ ಸ್ಥಾನವನ್ನು ವೈದ್ಯರಾದವರು ಜಾಗೃತಿಯಿಂದ ಕಾಪಾಡಿಕೊಳ್ಳಬೇಕು ಎಂದರು. ವೈದ್ಯರು ತಮ್ಮ ಬುದ್ಧಿವಂತಿಕೆಯ ಜತೆಗೆ ಹೃದಯವಂತಿಕೆಯಿಂದ ವೃತ್ತಿಯಲ್ಲಿ ಪಳಗಬೇಕು. ಅಂದಾಗ ಮಾತ್ರ ರೋಗಿಯ ಅರ್ಧ ಜಡ್ಡು ಹೋಗಲಿದೆ ಎಂದರು.

ಕಾಲೇಜಿನ ಪ್ರಾಚಾರ್ಯೆ ಡಾ. ಶುಕ್ಲಾ ಎಸ್. ಶೆಟ್ಟಿ, ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಡೀನ್ ಡಾ. ಮಂಜುನಾಥ್ ಆಲೂರ್, ನೇತ್ರ ವಿಜ್ಞಾನದ ಮುಖ್ಯಸ್ಥ ಡಾ. ರವೀಂದ್ರ ಬಣಕಾರ್, ಕಾಲೇಜಿನ ಸಿಬ್ಬಂದಿ, ಪಾಲಕರು ಮತ್ತು ವಿದ್ಯಾರ್ಥಿಗಳು ಇದ್ದರು.



**ದೊಡ್ಡಬಾತಿ ರೇವಣಸಿದ್ದೇಶ್ವರ ಸ್ವಾಮಿ ರಥೋತ್ಸವ**

ದಾವಣಗೆರೆ ಸಮೀಪದ ದೊಡ್ಡಬಾತಿ ಶ್ರೀ ರೇವಣಸಿದ್ದೇಶ್ವರ ರಥೋತ್ಸವವು ಶನಿವಾರ ತಡರಾತ್ರಿ ಅಪಾರ ಜನಸ್ತೋಮದೊಂದಿಗೆ ಜರುಗಿತು.

# ವಾಯುವಿಹಾರಿಗಳ ಜೊತೆ ಗಾಯತ್ರಿ ಸಿದ್ದೇಶ್ವರ ಚರ್ಚೆ

## ಅಭಿವೃದ್ಧಿ ಕಾರ್ಯಗಳನ್ನು ಜನರ ಮುಂದಿಟ್ಟ ಅಭ್ಯರ್ಥಿ, ವಿವಿಧೆಡೆ ಮತಯಾಚನೆ



ದಾವಣಗೆರೆ, ಮಾ. 23- ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರು ಶನಿವಾರ ಬೆಳಗ್ಗೆ ಕುಂದವಾಡ ಕೆರೆಗೆ ಭೇಟಿ ನೀಡಿ, ವಾಯುವಿಹಾರಿಗಳ ಜೊತೆ ಮಾತುಕತೆ ನಡೆಸಿದರು.

ಕೇಂದ್ರ ಸರ್ಕಾರದ ಸಾಧನೆಗಳು ಮತ್ತು ಜಿ.ಎಂ.ಸಿದ್ದೇಶ್ವರ ಅವರು 20 ವರ್ಷಗಳ ದಾವಣಗೆರೆ ಜಿ ಲ್ಲೆಯಲ್ಲಿ ಮಾಡಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ ವಾಯುವಿಹಾರಿಗಳ ಜೊತೆ ಚರ್ಚೆ ನಡೆಸಿದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಒತ್ತು ನೀಡಿದೆ. ವಿದೇಶಗಳ ಜೊತೆ ಉತ್ತಮ ಬಾಂಧವ್ಯ ಹೊಂದಿದ್ದು, ಇಡೀ ವಿಶ್ವವೇ ಇಂದು ಭಾರತದತ್ತ ತಿರುಗಿ ನೋಡುವಂತೆ ಮಾಡಿದ್ದಾರೆ. ನರೇಂದ್ರ ಮೋದಿ ಅವರ ಚಿಂತನೆ, ಅಭಿವೃದ್ಧಿಯ ದೃಷ್ಟಿಕೋನದಂತೆ ದಾವಣಗೆರೆಯಲ್ಲಿ ಜಿ. ಎಂ.ಸಿದ್ದೇಶ್ವರ್ ಅವರು ಕೋಟ್ಯಂತರ ರೂಪಾಯಿ ಅನುದಾನದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ. ರಾಜಕೀಯದಲ್ಲಿ ಮಹಿಳೆಯರು ಮುಂದೆ ಬರಬೇಕು ಅನ್ನೋ ದೃಷ್ಟಿಯಲ್ಲಿ ಈ ಬಾರಿ ಜಿ.ಎಂ.ಸಿದ್ದೇಶ್ವರ್ ಅವರ ಬದಲ ನನಗೆ ಟಿಕೆಟ್ ನೀಡಿದ್ದಾರೆ ಎಂದರು.

29 ವರ್ಷಗಳಿಂದ ಕ್ಷೇತ್ರದ ನೀವು ಹೇಗೆ ನಮ್ಮ ಕುಟುಂಬದ ಮೇಲೆ ನಂಬಿಕೆ ಇಟ್ಟು ಆಶೀರ್ವಾದ ಮಾಡುತ್ತಿದ್ದೀರೋ ಅದೇ ರೀತಿ ಈ ಬಾರಿಯೂ ನನಗೆ ಮತ ನೀಡುವ ಮೂಲಕ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಸಹಕಾರ ಮಾಡಬೇಕು ಎಂದು ವಾಯುವಿಹಾರಿಗಳ ಬಳಿ ಮತಯಾಚನೆ ಮಾಡಿದರು.

ಕಂದುವಾಡ ಕೆರೆ ಭೇಟಿ ಬಳಿಕ, ಗಂಗೂಬಾಯಿ ಹಾನಗಲ್ ಉದ್ಯಾನ ಸೇರಿದಂತೆ ಅಕ್ಕಪಕ್ಕದ ಉದ್ಯಾನವನಗಳಿಗೆ ಭೇಟಿ ನೀಡಿ ವಾ ಯುವಿಹಾರಿಗಳ ಬಳಿ ಮತಯಾಚನೆ ಮಾಡಿದರು. ಬಳಿಕ ರಸ್ತೆ ಬದಿ ವ್ಯಾಪಾ ಸ್ಥರ ಬಳಿ ತೆರಳಿ ಕಷ್ಟ-ಸುಖ ಆಲಿಸಿದ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅವರು ತಮ್ಮ ಜೊತೆ ಸದಾ ಇರುತ್ತೇನೆ ಎಂದು ಅಭಯ ನೀಡಿದರು.

ಪಾಲಿಕೆ ಸದಸ್ಯೆ ಶಿಲ್ಪಾ ಜಯಪ್ರಕಾಶ್, ಮುಖಂಡರಾದ ಗ್ಯಾರಹಳ್ಳಿ ಶಿವಯೋಗಿ, ಪಾಲಿಕೆ ಸದಸ್ಯೆ ರೇಖಾ ಸುರೇಶ್ ಗಂಡಗಾಳೆ, ಜಯಮ್ಮ, ಸವಿತಾ ರವಿಕುಮಾರ್, ಚಂದ್ರಕಲಾ, ಜ್ಯೋತಿ, ಸುರೇಶ್, ರಘು ಅಂಬರ್‌ಕರ್, ದೊಗ್ಗಳ್ಳಿ ಜಯ್ಯಣ್ಣ, ರಮೇಶ್, ನನ್ನಯ್ಯ ಸಿ. ಮತ್ತಿತರರು ಇದ್ದರು.

## ಬಿಎಸ್‌ಎನ್‌ಎಲ್ ರಜಾ ದಿನವೂ ಕೆಲಸ

ದಾವಣಗೆರೆ, ಮಾ. 23 - ಬಿಎಸ್‌ಎನ್‌ಎಲ್ ಮತ್ತು ಫ್ರಾಂಚೈಸಿ ಎಲ್ಲಾ ಗ್ರಾಹಕರ ಸೇವಾ ಕೇಂದ್ರಗಳು ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯಲ್ಲಿ ಮಾರ್ಚ್ 24ರ ಭಾನುವಾರ, ರಜಾ ದಿನಗಳಾದ ಇದೇ ದಿನಾಂಕ 29 ಮತ್ತು 31 ರಂದು ತೆರೆದಿರುತ್ತವೆ. ಗ್ರಾಹಕರು ಇದರ ಸದುಪಯೋಗ ಮಾಡಿಕೊಳ್ಳಲು ಬಿಎಸ್‌ಎನ್‌ಎಲ್ ಡೆಪ್ಯೂಟಿ ಜನರಲ್ ಮ್ಯಾನೇಜರ್ ತಿಳಿಸಿದ್ದಾರೆ.

## ಭೂಗತ ಪೂಜಾರಿ ಚೀನಾದಿಂದ ಹಸ್ತಾಂತರ

ನವದೆಹಲಿ, ಮಾ. 23 – ಹತ್ಯೆ, ಗಂಭೀರ ಅಪರಾಧ, ಹಣ ವಸೂಲಿ ಹಾಗೂ ಅಪಹರಣ ಸೇರಿದಂತೆ, ಹಲವಾರು ಪ್ರಕರಣಗಳಲ್ಲಿ ಭಾಗಿಯಾಗಿದ್ದ ಭೂಗತ ಪ್ರಸಾದ್ ಪೂಜಾರಿಯನ್ನು ಚೀನಾದಿಂದ ಹಸ್ತಾಂತರಿಸಲಾಗಿದೆ. ಭಾರತಕ್ಕೆ ಕರೆ ತಂದ ನಂತರ ಮುಂಬೈ ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ.

ಪೂಜಾರಿಯು ಭೂಗತರಾದ ಕುಮಾರ್ ಪಿಳ್ಳೈ ಹಾಗೂ ಛೋಟಾ ರಾಜನ್ ತಂಡದಲ್ಲಿದ್ದ. ಚೀನಾದಲ್ಲಿದ್ದ ಆತನ ವಿರುದ್ಧ ಇಂಟರ್‌ಪೋಲ್‌ನ ರೆಡ್ ಕಾರ್ನರ್ ನೋಟಿಸ್ ಇತ್ತು. ಕಳೆದ ವರ್ಷ ಆತನನ್ನು ಬಂಧಿಸಲಾಗಿತ್ತು. ಆತನ ಹಸ್ತಾಂತರಕ್ಕೆ ಮುಂಬೈ ಪೊಲೀಸರು ನಿರಂತರ ಪ್ರಯತ್ನ ನಡೆಸಿದ್ದರು.

## ಮದ್ಯ ಮಾರಾಟ, ಸರಬರಾಜು ನಿಷೇಧ

ದಾವಣಗೆರೆ, ಮಾ. 23- ದಾವಣಗೆರೆ ಜಿಲ್ಲೆಯಾದ್ಯಂತ ನಾಡಿದ್ದು ದಿನಾಂಕ 25 ರ ಸೋಮವಾರ ಹೋಳಿ ಹಬ್ಬದ ನಿಮಿತ್ತ ಬೆಳಿಗ್ಗೆ 6 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಮದ್ಯ ಮಾರಾಟ, ಮದ್ಯ ಸರಬರಾಜು ನಿಷೇಧಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ. ವೆಂಕಟೇಶ್ ಎಂ.ವಿ ಆದೇಶಿಸಿರುತ್ತಾರೆ.

# ಲೋಕಪಾಲ್ ಚಳವಳಿಯ ಕೇಜ್ರಿವಾಲ್ ಬಂಧನ ವಿಪರ್ಯಾಸ : ಹಜಾರೆ



ಮುಂಬೈ, ಮಾ. 23 – ಜನ ಲೋಕಪಾಲ್ ಚಳವಳಿಯ ಭಾಗವಾಗಿದ್ದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಈಗ ಭ್ರಷ್ಟಾಚಾರ ಪ್ರಕರಣದಲ್ಲಿ ಬಂಧಿತರಾಗಿರುವುದು ವಿಪರ್ಯಾಸ ಎಂದು ಸಾಮಾಜಿಕ ಕಾರ್ಯಕರ್ತ ಅಣ್ಣಾ ಹಜಾರೆ ಹೇಳಿದ್ದಾರೆ.

ಕೇಜ್ರಿವಾಲ್ ಅವರು ದೇಶದ ಕೋಟ್ಯಂತರ ಜನರ ನಂಬಿಕೆಗೆ ದ್ರೋಹ ಎಸಗಿದ್ದಾರೆ. 2011ರ ಭ್ರಷ್ಟಾಚಾರ ವಿರೋಧಿ ಚಳುವಳಿಯನ್ನು ರಾಜಕೀಯ ಮಹತ್ವಾಕಾಂಕ್ಷೆಗೆ ಹಾಳು ಮಾಡಿದ್ದಾರೆ ಎಂದು ಹಜಾರೆ ಹೇಳಿದರು.

ಕೇಜ್ರಿವಾಲ್ ಬಂಧನದಿಂದ ನನಗೆ ನೋವಾಗಿದೆ. ಜನ ಲೋಕಪಾಲ್ ಚಳವಳಿಯ ಭಾಗವಾಗಿದ್ದವರು, ಈಗ ಭ್ರಷ್ಟಾಚಾರ ಪ್ರಕರಣದಲ್ಲಿ ಬಂಧಿತರಾಗಿರುವುದು ವಿಪರ್ಯಾಸ ಎಂದವರು ಹೇಳಿದ್ದಾರೆ.

ಕಾಂಗ್ರೆಸ್ ನೇತೃತ್ವದ ಯು.ಪಿ.ಎ. ಸರ್ಕಾರದ ಅವಧಿಯಲ್ಲಿ ಜನ ಲೋಕಪಾಲ್ ಜಾರಿಗಾಗಿ ನಡೆಸಿದ ಹೋರಾಟ ಚಳವಳಿಯ ಸ್ವರೂಪ ಪಡೆದುಕೊಂಡಿತ್ತು. ಈ ಹೋರಾಟದಲ್ಲಿ ಹಜಾರೆ, ಕೇಜ್ರಿವಾಲ್ ಹಾಗೂ ಮನೀಶ್ ಸಿಸೋಡಿಯ ಮುಂಚೂಣಿಯಲ್ಲಿದ್ದರು.

ನಂತರ ಕೇಜ್ರಿವಾಲ್ ಅವರು ಆಮ್ ಆದ್ಮಿ ಪಾರ್ಟಿ ಸ್ಥಾಪಿಸಿದ್ದರು. ಹೋರಾಟ ರಾಜಕೀಯ ಸ್ವರೂಪ ಪಡೆದುಕೊಂಡ ನಂತರ, ಹಜಾರೆ ಅದರಿಂದ ದೂರವಾಗಿದ್ದರು.

# ನಗರದಲ್ಲಿ ವಿಕಾಸ ತರಂಗಿಣಿಯಿಂದ ಉಚಿತ ಮಜ್ಜಿಗೆ ವಿತರಣೆ



ದಾವಣಗೆರೆ, ಮಾ. 23- ಸಾಮಾಜಿಕ ಸೇವಾ ಸಂಸ್ಥೆ 'ವಿಕಾಸ ತರಂಗಿಣಿ' ವತಿಯಿಂದ ಮಹಾನಗರ ಪಾಲಿಕೆ ಮುಂಭಾಗದಲ್ಲಿ ಸಾರ್ವಜನಿಕರಿಗೆ ಉಚಿತ ಮಜ್ಜಿಗೆಯನ್ನು ವಿತರಿಸುವ ಕಾರ್ಯಕ್ರಮವನ್ನು ಇಂದು ಆರಂಭಿಸಲಾಯಿತು.

ಪ್ರತಿ ವರ್ಷದಂತೆ ಈ ವರ್ಷವೂ 29ನೇ ವರ್ಷದ ಉಚಿತ ಮಜ್ಜಿಗೆಯನ್ನು ಇಂದಿನಿಂದ 2 ತಿಂಗಳ ಕಾಲ ದಾನಿಗಳ ಸಹಕಾರದೊಂದಿಗೆ ಸಾರ್ವಜನಿಕರಿಗೆ ವಿತರಿಸಲಾಗುತ್ತದೆ ಎಂದು ಸಂಸ್ಥೆಯ ಸಂಸ್ಥಾಪಕ ಸತ್ಯನಾರಾಯಣ ಮೂರ್ತಿ ತಿಳಿಸಿದ್ದಾರೆ.

## ಪುರಿ ಜಗನ್ನಾಥ ದೇವಾಲಯವನ್ನು ಪ್ರವೇಶಿಸಿದ ವಿದೇಶಿ ಮಹಿಳೆ ವಶಕ್ಕೆ

ಪುರಿ, ಮಾ. 23 – ಒಡಿಶಾದ ಪುರಿ ಜಗನ್ನಾಥ ದೇವಾಲಯದಲ್ಲಿ ಅಕ್ರಮ ಪ್ರವೇಶ ಮಾಡಿದ ಆರೋಪದ ಮೇಲೆ ಪೋಲ್ಯಾಂಡ್‌ನ ಮಹಿಳೆಯೊಬ್ಬರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದೇವಾಲಯದ ಬೈಶಿಪಹಚ ಪ್ರದೇಶದ ಬಳಿ ಕಂಡು ಬಂದ ಅವರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ಶ್ರೀ ಜಗನ್ನಾಥ ದೇವಾಲಯದ ಕಾಯ್ದೆಯ ಪ್ರಕಾರ, ಹಿಂದೂಗಳಲ್ಲದವರು ದೇವಾಲಯ ಪ್ರವೇಶಿಸುವಂತಿಲ್ಲ.

## ಕೊಡದಗುಡ್ಡದಲ್ಲಿ ನಾಡಿದ್ದು ವೀರಭದ್ರೇಶ್ವರ ರಥೋತ್ಸವ



ಜಗಳೂರು, ಮಾ. 23- ತಾಲ್ಲೂಕಿನ ಕೊಡದ ಗುಡ್ಡದಲ್ಲಿ ಇದೇ ದಿನಾಂಕ 26ರ ಮಂಗಳವಾರ ಸಂಜೆ 4.30 ಕ್ಕೆ ಶ್ರೀ ವೀರಭದ್ರೇಶ್ವರ ರಥೋತ್ಸವ ನಡೆಯಲಿದೆ.


**ಮನೆ ಕೆಲಸಕ್ಕೆ ಬೇಕಾಗಿದ್ದಾರೆ**

ಮನೆ ಕೆಲಸಕ್ಕೆ ಕುಟುಂಬ ಬೇಕಾಗಿದ್ದಾರೆ.
ವಾಸಕ್ಕೆ ಸರ್ವಿಸ್ ಕ್ವಾಟ್ರಸ್ ಕೊಡಲಾಗುವುದು.
ಸಸ್ಯಹಾರಿ. ಚಿಕ್ಕ ಕುಟುಂಬ ಇರಬೇಕು.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ.
**9686195326**
**9686195329**


# ಹರಿಹರ: ಕುಡಿಯುವ ನೀರಿನ ಸಮಸ್ಯೆ ಪರಿಶೀಲಿಸಿದ ಶಾಸಕ ಬಿ.ಪಿ.ಹರೀಶ್



ಹರಿಹರ,ಮಾ.23- ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿ ರುವ ಕಾರಣ ಶಾಸಕ ಬಿ.ಪಿ. ಹರೀಶ್ ಅವರು ನಗರದ ಗುತ್ತೂರು, ಹಳೆ ಹರ್ಲಾಪುರ , ದೇವಸ್ಥಾನ ರಸ್ತೆ , ಗಂಗಾ ನಗರ, ಹಳ್ಳದಕೇರಿ, ವಿದ್ಯಾನಗರ, ಜೈ ಭೀಮ್ ನಗರ ಭಾಗದಲ್ಲಿ ಇಂದು ಸಂಚರಿಸಿ ಜನರ ಸಮಸ್ಯೆಗಳನ್ನು ಆಲಿಸಿದರು. ಸಾರ್ವಜನಿಕರಿಗೆ ಯಾವುದೇ ತೊಂದರೆಗಳು ಆಗದಂತೆ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಸ್ಥಳದಲ್ಲಿ ಹಾಜರಿದ್ದ, ನಗರಸಭೆ ಪೌರಾಯುಕ್ತ ಐಗೂರು ಬಸವರಾಜ್ ಮತ್ತು ಕುಡಿಯುವ ನೀರು ಸರಬರಾಜು ಇಲಾಖೆಯ ಇಂಜಿನಿಯರ್‌ಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಎಇಇ ತಿಪ್ಪೇಸ್ವಾಮಿ, ಇಂಜಿನಿಯರ್ ಮಂಜುನಾಥ್, ರೆಹಮಾನ್, ಬಿಜೆಪಿ ಪಕ್ಷದ ಮುಖಂಡ ರಾಜು ರೋಖಡೆ, ವಿನಾಯಕ ಆರಾಧ್ಯಮಠ್, ಇತರರು ಹಾಜರಿದ್ದರು.


It's time to take care of your loved once
Aarogyam
Thyrocare Tests you can trust
Flat 45% OFF
ALL AAROGYAM PAKAGES
BUY 1 GET 1 FREE
SPECIAL DISCOUNTS AVAILABLE
ಥೈರೋಕೇರ್ ನ ವತಿಯಿಂದ ಆರೋಗ್ಯ ಶಿಬಿರವನ್ನು
ದಿನಾಂಕ 25.03.2024 ರಿಂದ 28.03.2024 ರವರೆಗೆ ದಾವಣಗೆರೆಯಲ್ಲಿ
ಈ ಕೆಳಕಂಡ ವಿಳಾಸದಲ್ಲಿ ಹಮ್ಮಿಕೊಂಡಿದೆ
ಸಾಯಿ ಬಾಲಾಜಿ ಸ್ಪೆಷಾಲಿಟಿ ಸೆಂಟರ್ SAI BALAJI SPECIALITY CENTER
ಕೃಷ್ಣ ಕಾಲ ಮಂದಿರ ಎದುರುಗಡೆ OPP KRISHNA KALA MANDIRA
ಎಂ ಸಿ ಸಿ ಎ ಬ್ಲಾಕ್ ದಾವಣಗೆರೆ MCCA BLOCK DAVANGERE
7019143450 , 9449835659



ssims SPARSH CENTRE FOR ACCIDENTS BONE & JOINT CARE
ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ
ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು
• ಕೀಲು ನೋವು • ಕೀಲು ಮರುಜೋಡಣೆ
• ಮೊಣಕಾಲು ನೋವು • ಹಿಪ್ ಮರುಜೋಡಣೆ
• ಭುಜದ ನೋವು • ರಿವಿಷನ್ ಶಸ್ತ್ರಚಿಕಿತ್ಸೆ
• ಸ್ಪೋರ್ಟ್ಸ್ ಇಂಜುರೀಸ್ • ಡಿಫಾರ್ಮಿಟಿ ಸರಿಪಡಿಸುವಿಕೆ
ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ
ದಿನಾಂಕ: ಮಂಗಳವಾರ, 26ನೇ ಮಾರ್ಚ್ 2024 । ಸಮಯ: ಬೆಳಿಗ್ಗೆ 11 ರಿಂದ ಸಂಜೆ 4ರವರೆಗೆ
ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002
ನೋಂದಣಿಗಾಗಿ ಕರೆಮಾಡಿ: 96869 29090 / 99800 33277
ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas